ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

SHRIDEVI EDUCATION

ಮಾಸಪತ್ರಿಕೆ
ಸಂಪುಟ 2, ಸಂಚಿಕೆ 2
ಡಿಸೆಂಬರ್ 2023

SHRIDEVI ANTARANGA
Monthly Magazine






**ಪ್ರಧಾನ ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಪ್ರಧಾನಿ ನರೇಂದ್ರ ಮೋದಿ ಅವರು ಹೇಳುವಂತೆ ಈ ಚುನಾವಣೆಯಲ್ಲಿ ನಾಲ್ಕು ಶಕ್ತಿಗಳು ಬಿಜೆಪಿ ಪಕ್ಷವನ್ನು ಬೆಂಬಲಿಸಿವೆ. ಅವುಗಳೆಂದರೆ ನಾರಿಶಕ್ತಿ, ಯುವಶಕ್ತಿ, ರೈತಶಕ್ತಿ ಮತ್ತು ಬಡವರ ಶಕ್ತಿ....**

## ಲೋಕಸಭಾ ಚುನಾವಣೆಯ ದಿಕ್ಸೂಚಿ

ಡಿಸೆಂಬರ್ 3ರಂದು ರಾತ್ರಿ ಮಿತ್ರರಾದ ಡಾ.ಕಮಲೇಶ್ ದೂರವಾಣಿ ಕರೆ ಮಾಡಿ, ಅಂದು ಪ್ರಕಟವಾದ ನಾಲ್ಕು ರಾಜ್ಯಗಳ ಚುನಾವಣಾ ಫಲಿತಾಂಶ ಕುರಿತು ಮಾತನಾಡಿದರು. ನಮ್ಮ ಮಾತಿನ ನಡುವೆ ಚುನಾವಣಾ ಫಲಿತಾಂಶದ ಸಮೀಕ್ಷೆಯ ವಿಚಾರ ಸಹ ಪ್ರಸ್ತಾಪವಾಯಿತು. ಈಗ ಚುನಾವಣಾ ಸಮೀಕ್ಷೆಗಳು ಕೇವಲ ಟಿ.ವಿ.ಯವರ ಚರ್ಚೆಯ ವಿಷಯವಾಗಬಹುದು. ಆದರೆ ಅವು ಜನರ ನಾಡಿಮಿಡಿತವನ್ನು ಅರಿಯಲಾರವು. ಅದಕ್ಕೆ ಕಾರಣ ಜನಸಾಮಾನ್ಯರ ಮತ್ತು ಮಾಧ್ಯಮಗಳ ನಡುವೆ ಭಾರಿ ಕಂದಕವಿದೆ.


ಪಂಚ ರಾಜ್ಯಗಳ ಚುನಾವಣೆಗಳ ಮತದಾನ ನವೆಂಬರ್ 7 ಮತ್ತು 30ರಂದು ನಡೆಯಿತು. ಮಿಜೋರಾಂ ಹೊರತುಪಡಿಸಿ ಉಳಿದ ರಾಜ್ಯಗಳ ಚುನಾವಣಾ ಫಲಿತಾಂಶ ಡಿಸೆಂಬರ್ 3ರಂದು ಪ್ರಕಟವಾಯಿತು. ತೆಲಂಗಾಣ ಹೊರತುಪಡಿಸಿ ಉಳಿದ ಮೂರು ರಾಜ್ಯಗಳಲ್ಲಿ ಅಂದರೆ ಮಧ್ಯಪ್ರದೇಶ, ಛತ್ತೀಸ್‌ಗಢ ಹಾಗೂ ರಾಜಸ್ತಾನಗಳಲ್ಲಿ ಬಿಜೆಪಿ ಅದ್ಭುತವಾಗಿ ಜಯಭೇರಿ ಬಾರಿಸಿದೆ.

ಮಧ್ಯಪ್ರದೇಶದ ಚುನಾವಣಾ ಫಲಿತಾಂಶ ಮಾಧ್ಯಮದವರನ್ನು ಮೂರ್ಖರನ್ನಾಗಿಸಿದೆ. 163 ವಿಧಾನಸಭಾ ಸ್ಥಾನಗಳನ್ನು ಬಿಜೆಪಿ ಈ ಚುನಾವಣೆಯಲ್ಲಿ ತನ್ನದನ್ನಾಗಿಸಿಕೊಂಡಿದೆ. ಇಂತಹ ಫಲಿತಾಂಶ ಬರಲು ಅಲ್ಲಿನ ಮಹಿಳೆಯರು ಮತ್ತು ಪರಿಶಿಷ್ಟವರ್ಗದ ಜನರು ಬಿಜೆಪಿ ಪಕ್ಷದ ಕೈ ಹಿಡಿದಿರುವುದು ಕಾರಣವಾಗಿದೆ. ಮಾಧ್ಯಮದವರ ಊಹೆಯಂತೆ ಆಡಳಿತವಿರೋಧಿ ಅಲೆ ಅಲ್ಲಿ ಕೆಲಸ ಮಾಡಿಲ್ಲ. ಈ ಫಲಿತಾಂಶ ಬರಲು ಮುಖ್ಯಮಂತ್ರಿ ಶಿವರಾಜ್‌ಸಿಂಗ್ ಚೌಹಾಣ್ ಪರಿಶ್ರಮವಿರುವುದನ್ನು ಮರೆಯುವಂತಿಲ್ಲ. ಆರು ತಿಂಗಳ ಮೊದಲೇ ಅವರು ಕರ್ನಾಟಕದ ಅನೇಕ ಗ್ಯಾರಂಟಿ ಯೋಜನೆಗಳನ್ನು ತಮ್ಮ ಆಡಳಿತದಲ್ಲಿ ಅಳವಡಿಸಿಕೊಂಡಿದ್ದರು.

ಈ ಸಲದ ಚುನಾವಣೆಯಲ್ಲಿ ಛತ್ತೀಸ್‌ಗಢ ಮತದಾರರು ಬಿಜೆಪಿ ಪಕ್ಷವನ್ನು ಬೆಂಬಲಿಸುತ್ತಾರೆ ಎಂದು ಅಲ್ಲಿನ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಪಕ್ಷದ ಹಿರಿಯ ನಾಯಕರಾದ ರಮಣಸಿಂಗ್ ಹೇಳಿದ್ದರು. ಮಾಧ್ಯಮಗಳು ಅವರ ಮಾತನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಮುಖ್ಯಮಂತ್ರಿ ಭೂಪೇಶ್ ಬಗೇಲ ಅವರು ನಿರಂತರವಾಗಿ ರಾಷ್ಟ್ರೀಯ ಪತ್ರಿಕೆಗಳಿಗೆ ಕೊಡುತ್ತಿದ್ದ ಜಾಹೀರಾತಿನ ಮೋಡಿಗೆ ಮಾಧ್ಯಮದವರು ಮರುಳಾಗಿದ್ದರು.

ರಾಜಸ್ತಾನ ತನ್ನ ಪರಂಪರೆಯನ್ನು ಉಳಿಸಿಕೊಂಡಿದೆ. ಈ ಮೂರು ರಾಜ್ಯಗಳಲ್ಲಿ ಬಿಜೆಪಿ ಕೇವಲ ಬಹುಮತಕ್ಕಷ್ಟೇ ಸೀಮಿತಗೊಳ್ಳದೆ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಂಡಿದೆ. ಇದಕ್ಕೆ ಕಾರಣಕರ್ತರು ಪ್ರಧಾನಿ ಸನ್ಮಾನ್ಯ ಶ್ರೀ ನರೇಂದ್ರ ಮೋದಿ, ಜೊತೆಗೆ ಭಾರತ ಸರ್ಕಾರದ ಗೃಹ ಸಚಿವರಾದ ಶ್ರೀ ಅಮಿತ್ ಷಾ ಮತ್ತು ಬಿಜೆಪಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ಜೆ.ಪಿ.ನಡ್ಡಾ ಅವರಿಗೂ ಈ ಚುನಾವಣೆಯ ಶ್ರೇಯಸ್ಸು ಸಲ್ಲಬೇಕು. ಈ ಮೂವರು ದೇಶದ ಜನತೆಯ ಅಭಿನಂದನೆಗೆ ಪಾತ್ರರು. ಇದರ ಜೊತೆ ಸ್ಥಳೀಯ ಬಿಜೆಪಿ ನಾಯಕರು ತಮ್ಮ ಭಿನ್ನಮತ ಮರೆತು ಒಗ್ಗಟ್ಟಿನಿಂದ ಚುನಾವಣೆ ಎದುರಿಸಿದ್ದಾರೆ. ಕೇಂದ್ರ ಸರ್ಕಾರದ ಸಾಧನೆಯನ್ನು ಜನಸಾಮಾನ್ಯರ ಬಳಿಗೆ ಕರೆತಂದಿದ್ದಾರೆ.

▶▶ 6ನೇ ಪುಟಕ್ಕೆ...



## ಶ್ರೀದೇವಿ ಆಸ್ಪತ್ರೆಗೆ ವಿನಮ್ರ ಧನ್ಯವಾದಗಳು



■ ಡಾ. ಸಿ.ಪಿ.ಚಂದ್ರಪ್ಪ
ಉಪ ಪ್ರಾಂಶುಪಾಲರು
ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್

ಸಂಸ್ಥೆಯ ಅಧ್ಯಕ್ಷರಾದ ಡಾ ಎಂ. ಆರ್. ಹುಲಿನಾಯ್ಕರ್ ಅವರ ಕಿರಿಯ ಸಹೋದರ ಬಸಪ್ಪ ಎಂ ಹುಲಿನಾಯ್ಕರ್ ಅವರು ಕೆಲವು ವೈದ್ಯಕೀಯ ಸಮಸ್ಯೆಗಳಿಂದಾಗಿ 2023ರ ಜೂನ್ 6ರಂದು ನಿಧನರಾದರು.

ಅವರ ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಧಾರವಾಡ ಜಿಲ್ಲೆಯ ತುಪ್ಪದಕುರಹಟ್ಟಿಗೆ ಪ್ರಯಾಣ ಬೆಳೆಸಿದ್ದೆ. ಪ್ರಯಾಣ ಮಾಡುತ್ತಿದ್ದಾಗಲೇ ಅಂದರೆ ಮಧ್ಯಾಹ್ನ 3 ಗಂಟೆ ಸುಮಾರಿಗೆ ನನ್ನ ಪತ್ನಿ ಸುಜಾತಾ ನನಗೆ ಕರೆ ಮಾಡಿ, 'ನನಗೆ ಹೆರಿಗೆ ನೋವು ಬರುತ್ತಿದೆ' ಎಂದು ತಿಳಿಸಿದರು. ತಕ್ಷಣ ನನ್ನ ಸೋದರಳಿಯ ಶ್ರೀಗಿರಿರಂಗ ಅವರಿಗೆ ಕರೆ ಮಾಡಿ ವಿಷಯವನ್ನು ತಿಳಿಸಿ, ಪತ್ನಿ ಸುಜಾತಾ ಅವರನ್ನು ತಕ್ಷಣ ಶ್ರೀದೇವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಮತ್ತು ಸಂಶೋಧನಾ ಆಸ್ಪತ್ರೆಗೆ ಕರೆದೊಯ್ಯುವಂತೆ ತಿಳಿಸಿದೆ. ಅಷ್ಟರಲ್ಲಿ ಪ್ರೊಫೆಸರ್ ಮತ್ತು OBG ವಿಭಾಗದ ಮುಖ್ಯಸ್ಥರಾದ ಡಾ. ರೇಖಾ ಗುರುಮೂರ್ತಿ ಅವರಿಗೆ ಕರೆ ಮಾಡಿ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದೆ. ಡಾ. ರೇಖಾ ಅವರು ತಮ್ಮಲ್ಲಿಗೆ ಬರುವುದಕ್ಕೆ ಮುನ್ನ ಸಿ.ಟಿ. ಸ್ಕ್ಯಾನ್ ಮಾಡಿಸಿಕೊಂಡು ಬರುವಂತೆ ಸೂಚಿಸಿದರು.

ತಕ್ಷಣವೇ ನನ್ನ ಸಹೋದ್ಯೋಗಿಗಳಾದ ಶ್ರೀ ಲಿಖಿತ ಗೌಡ ಅವರಿಗೆ ಕರೆ ಮಾಡಿ, ನನ್ನ ಪತ್ನಿಗೆ ಸ್ಕ್ಯಾನ್ ಮಾಡಲು ಸಹಾಯ ಮಾಡುವಂತೆ ವಿನಂತಿಸಿದೆ. ಅವರು ತಕ್ಷಣವೇ ರೇಡಿಯಾಲಜಿ ವಿಭಾಗಕ್ಕೆ ತೆರಳಿ, ಅಲ್ಲಿ ರೇಡಿಯಾಲಜಿಶಾಸ್ತ್ರಜ್ಞರ ಸಹಾಯದಿಂದ ಸ್ಕ್ಯಾನ್ ಮಾಡಲು ಸಹಕರಿಸಿದರು. ಆ ಸಂದರ್ಭದಲ್ಲಿ ಡಾ. ರೇಖಾ ಅವರು ಆಪರೇಷನ್ ಥಿಯೇಟರ್‌ನಲ್ಲಿ ಮತ್ತೊಂದು ತುರ್ತು ಕಾರ್ಯಾಚರಣೆಯಲ್ಲಿ ನಿರತರಾಗಿದ್ದರು. ನಾನು ಇತರ ವೈದ್ಯರೊಂದಿಗೆ ಮಾತನಾಡಿದೆ. ಸ್ವಲ್ಪ ಸಮಯದ ನಂತರ ಡಾ. ರೇಖಾ ಅವರೇ ಕರೆ ಮಾಡಿ, ಸ್ಕ್ಯಾನಿಂಗ್ ವರದಿಗಳನ್ನು ಉಲ್ಲೇಖಿಸಿ, 'ಸ್ಥಿತಿ ಗಂಭೀರವಾಗಿದೆ, ಈಗ ತುರ್ತು ಚಿಕಿತ್ಸೆ ಅಗತ್ಯವಿದೆ' ಎಂದರು. ನಮ್ಮ ಆಸ್ಪತ್ರೆಯ ವೈದ್ಯರು ಮತ್ತು ಸಿಬ್ಬಂದಿಯ ಮೇಲೆ ಸಂಪೂರ್ಣ ವಿಶ್ವಾಸವಿದ್ದ ನಾನು, ಅಗತ್ಯ ಕ್ರಮ ಕೈಗೊಳ್ಳುವಂತೆ ಅವರನ್ನು ವಿನಂತಿಸಿದೆ.

ತುಪ್ಪದಕುರಹಟ್ಟಿಯಲ್ಲಿ ಅಂತ್ಯಸಂಸ್ಕಾರದ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ, ಶ್ರೀದೇವಿ ಹುಡುಗರ ಹಾಸ್ಟೆಲ್ ಮ್ಯಾನೇಜರ್ ವಾಸುದೇವ್ ಅವರಿಗೆ ವಿಚಾರ ತಿಳಿಸಿದೆ. ಅವರು ನಾನು ತುಮಕೂರಿಗೆ ಬೇಗ ತಲುಪುವ ಸಂಚಾರದ ವ್ಯವಸ್ಥೆ ಮಾಡಿದರು. ಸಂಜೆ 6.30ಕ್ಕೆ ತುಪ್ಪದಕುರಹಟ್ಟಿಯಿಂದ ತುಮಕೂರಿಗೆ ಪ್ರಯಾಣ ಆರಂಭಿಸಿದೆ. ಅಲ್ಲಿಂದ ಹೊರಡುತ್ತಿದ್ದಂತೆ, ನನ್ನ ಮಾವ ಮತ್ತು ಅತ್ತಿಗೆ ಕರೆ ಮಾಡಿ ಅಭಿನಂದಿಸಿದರು. ಗಂಡು ಹಾಗೂ ಹೆಣ್ಣು ಅವಳಿ ಮಕ್ಕಳು ಜನಿಸಿರುವ ಬಗ್ಗೆ ಮಾಹಿತಿ



ನೀಡಿದರು. ಈ ವಿಷಯ ತಿಳಿದು ನನಗೆ ಬಹಳ ಸಂತೋಷವಾಯಿತು. ಆ ಸಂತೋಷ ಬಹಳ ಹೊತ್ತು ಇರಲಿಲ್ಲ. ಆ ಹಂತದಿಂದಲೇ ಹಲವಾರು ಸಮಸ್ಯೆಗಳು ಪ್ರಾರಂಭವಾದವು.

ಅವಧಿಪೂರ್ವ ಹೆರಿಗೆ ಕಾರಣ ಅತ್ಯಂತ ಕಡಿಮೆ ಜನನ ತೂಕದ (ELBW-ಗಂಡು) (1.1 ಕೆಜಿ ಹಾಗೂ ಹೆಣ್ಣು 940 ಗ್ರಾಂ) ಮಕ್ಕಳು ಜನಿಸಿದ್ದವು. ಅವುಗಳ ಉಸಿರಾಟದ ತೊಂದರೆಯನ್ನು ನಿರ್ವಹಿಸಲು ಶಿಶುಗಳನ್ನು ತುರ್ತು ಆರೈಕೆಗಾಗಿ ಪೀಡಿಯಾಟ್ರಿಕ್ಸ್ ವಿಭಾಗದ ನವಜಾತ ಶಿಶುಗಳ ತೀವ್ರ ನಿಗಾ ಘಟಕಕ್ಕೆ (NICU) ಸ್ಥಳಾಂತರಿಸಲಾಯಿತು.

ಆಗ ಮಕ್ಕಳ ವೈದ್ಯರೊಬ್ಬರು ನನಗೆ ಕರೆ ಮಾಡಿ, ಶಿಶುಗಳಲ್ಲಿದ್ದ ಎಲ್ಲಾ ನಿರ್ಣಾಯಕ ಸಮಸ್ಯೆಗಳನ್ನು ವಿವರಿಸಿದರು. ಮಕ್ಕಳನ್ನು ಉಳಿಸಲು ತಮ್ಮ ಕೈಲಾದಷ್ಟು ಪ್ರಯತ್ನಿಸುವುದಾಗಿ ಹೇಳಿದರು. ಇದರಿಂದ ನಾನು ಬಹಳ ಕುಗ್ಗಿಹೋದೆ. ಶಿಶುಗಳಿಗೆ ಅಗತ್ಯವಿರುವ ಎಲ್ಲಾ ವೈದ್ಯಕೀಯ ಕಾರ್ಯ ವಿಧಾನಗಳನ್ನು ನಡೆಸುವಂತೆ ಅವರನ್ನು ಕೇಳಿಕೊಂಡೆ.

ಕೂಡಲೇ ಡಾ. ಲಾವಣ್ಯ ರಮಣ ಅವರಿಗೆ ಕರೆ ಮಾಡಿ, ನಮ್ಮ ಮಕ್ಕಳ ಜನನದ ಬಗ್ಗೆ ಹೇಳಿದೆ. ಮಕ್ಕಳ ಜನನದ ವಿಚಾರ ಕೇಳಿ ಬಹಳ ಖುಷಿಪಟ್ಟರು ಹಾಗೂ ಅಭಿನಂದಿಸಿದರು. ಅಧ್ಯಕ್ಷರಾದ ಗೌರವಾನ್ವಿತ ಡಾ. ಎಂ ಆರ್ ಹುಲಿನಾಯ್ಕರ್ ಅವರು ನನಗೆ ಕರೆ ಮಾಡಿ ಅಭಿನಂದಿಸಿದರು. ನನ್ನ ಶಿಶುಗಳ ಬಗ್ಗೆ ಸಾಕಷ್ಟು ಕಾಳಜಿ ವಹಿಸುವಂತೆ ಸಲಹೆ ನೀಡಿದರು. ವೈದ್ಯಕೀಯ ನಿರ್ದೇಶಕರಾದ ರಮಣ ಅವರು ಕರೆ ಮಾಡಿ, ನಮ್ಮ ಆಸ್ಪತ್ರೆಯ ಇಡೀ ವ್ಯವಸ್ಥೆಯು ನಿಮ್ಮೊಂದಿಗೆ ಇರುತ್ತದೆ ಎನ್ನುವ ಭರವಸೆ ನೀಡಿದರು. ಇದರಿಂದ ನನ್ನಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮೂಡಿತು.

ಡಾಕ್ಟರ್ ಲಾವಣ್ಯ ಅವರಿಗೆ ಕರೆ ಮಾಡಿ, ಯಾವುದೇ ಅಡೆತಡೆಗಳಿಲ್ಲದೆ ಕಾರ್ಯವಿಧಾನಗಳನ್ನು ಮುಂದುವರಿಸುವಂತೆ ಆಸ್ಪತ್ರೆಯಲ್ಲಿರುವ ಸಿಬ್ಬಂದಿಗೆ ತಿಳಿಸಲು ವಿನಂತಿಸಿದೆ. ಅದಕ್ಕೆ ಅವರು 'ನೀವು ಧೈರ್ಯವಾಗಿರಿ. ಚಿಂತಿಸಬೇಡಿ ನಿಮ್ಮ ಮಕ್ಕಳನ್ನು ನಾವು ನೋಡಿಕೊಳ್ಳುತ್ತೇವೆ' ಎಂದು ಭರವಸೆ ನೀಡಿದರು.

▶▶ 7ನೇ ಪುಟಕ್ಕೆ...

## ನವೆಂಬರ್ 23ರಂದು ನಡೆದ ಪತ್ರಿಕಾಗೋಷ್ಠಿ

# ಡಾ..ಹುಲಿನಾಯ್ಕರ್ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಬಿಡುಗಡೆ




"ಕ್ರಿಯಾಶೀಲ ಕಾಯಕಯೋಗಿ, ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಶ್ರೀದೇವಿ ಶಿಕ್ಷಣ ಸಮೂಹ ಸಂಸ್ಥೆಗಳ ಸಂಸ್ಥಾಪಕರಾದ ಶ್ರೀಯುತ ಡಾ. ಎಂ. ಆರ್. ಹುಲಿನಾಯ್ಕರ್ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಕೃತಿಯು ಇದೇ ನವೆಂಬರ್ 25 ಶನಿವಾರ ಬೆಳಗ್ಗೆ 11ಕ್ಕೆ ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಜರುಗಲಿದೆ" ಎಂದು ಡಾ.ಎಂ.ಆರ್.ಹುಲಿನಾಯ್ಕರ್ ಅಮೃತ ಮಹೋತ್ಸವ ಸಮಿತಿಯ ಗೌರವಾಧ್ಯಕ್ಷ ಟಿ. ಆರ್. ಆಂಜನಪ್ಪ, ಅಧ್ಯಕ್ಷರಾದ ಪ್ರಜಾಪ್ರಗತಿ ಸಂಪಾದಕ ಎಸ್. ನಾಗಣ್ಣ ಹಾಗೂ ಪ್ರಧಾನ ಸಂಚಾಲಕರಾದ ಟಿ.ಎನ್.ಮಧುಕರ ಅವರುಗಳು ಮಾಧ್ಯಮ ಪ್ರತಿನಿಧಿಗಳಿಗೆ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ವಿವರಗಳನ್ನು ಹಂಚಿಕೊಂಡರು. ಅವರುಗಳು ಹೇಳಿದ ಅಂಶಗಳಿವು:

"ಡಾ. ಹುಲಿನಾಯ್ಕರ್ ಶಿಕ್ಷಣ, ಆರೋಗ್ಯ, ಧಾರ್ಮಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಮಾತ್ರವಲ್ಲದೆ ರಾಜ್ಯದಾದ್ಯಂತ ತಮ್ಮ ಕೊಡುಗೆಗಳಿಂದಾಗಿ ಪ್ರಸಿದ್ಧರಾಗಿದ್ದಾರೆ. ಹಿಂದುಳಿದ ಹಾಲುಮತ ಸಮುದಾಯದ ಸಂಸ್ಕಾರವಂತ ಕುಟುಂಬದಲ್ಲಿ ಹುಟ್ಟಿ, ವೃತ್ತಿಯ ಬದುಕಿಗಾಗಿ ಉತ್ತರ ಕರ್ನಾಟಕದಿಂದ ದಕ್ಷಿಣ ಕರ್ನಾಟಕಕ್ಕೆ ಬಂದು, ಕಲ್ಪತರುನಾಡು ತುಮಕೂರಿನಲ್ಲಿ ನೆಲೆ ನಿಂತು ಸಮಾಜಮುಖಿಯಾಗಿ ಸಾಧನೆ ಮಾಡುತ್ತಿರುವುದು ನಾವೆಲ್ಲರೂ ಹೆಮ್ಮೆಪಡಬೇಕಾಗಿರುವ ಸಂಗತಿ. ಅಜಾತಶತ್ರುವೆಂದು ಪ್ರಸಿದ್ಧವಾಗಿರುವ ಡಾಕ್ಟರ್ ಹುಲಿನಾಯ್ಕರ್ ಅವರ ಐದು ದಶಕದ ಸಾರ್ಥಕ ಸಾರ್ವಜನಿಕ ಸೇವೆಯನ್ನು ಪರಿಗಣಿಸಿ, ಅವರಿಗೆ 75ನೇ ವರ್ಷ ತುಂಬಿರುವ ಈ ಶುಭ ಸಂದರ್ಭದಲ್ಲಿ ಅವರಿಗೆ ಗೌರವ ಸಮರ್ಪಣೆ ಮಾಡಬೇಕು ಎಂದು ಅವರ ಅಭಿಮಾನಿಗಳು, ಹಿತೈಷಿಗಳು, ಪಕ್ಷಾತೀತವಾಗಿ ರಾಜಕೀಯ ಮುಖಂಡರು ಮತ್ತು ಸಂಘ ಸಂಸ್ಥೆಗಳ ಪದಾಧಿಕಾರಿಗಳು ನಿರ್ಧಾರ ಮಾಡಿದ್ದಾರೆ. ಡಾ.ಹುಲಿನಾಯ್ಕರ್ ಅವರ ಸಾರ್ವಜನಿಕ ಕ್ಷೇತ್ರದ ಕುಟುಂಬ ತುಂಬಾ ದೊಡ್ಡದು. ಅವರುಗಳ ಆಶಯದಂತೆ ಈ ಕಾರ್ಯಕ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ.

"ತುಮಕೂರು ಜಿಲ್ಲೆ, ರಾಜ್ಯ, ದೇಶದ ವಿವಿಧ ಭಾಗಗಳಿಂದಲೂ ಹುಲಿನಾಯ್ಕರ್ ಅವರ ಅಭಿಮಾನಿಗಳು, ಹಿತೈಷಿಗಳು ಮತ್ತು ವಿವಿಧ ಕ್ಷೇತ್ರದ ಮುಖಂಡರು ಸೇರಿದಂತೆ ಹತ್ತು ಸಾವಿರಕ್ಕೂ ಮೇಲ್ಪಟ್ಟು ಜನರು ಈ ಸಮಾರಂಭದಲ್ಲಿ ಪಾಲ್ಗೊಳ್ಳುತ್ತಾರೆ.

"ಕಳೆದ ಮೂರು ತಿಂಗಳಿಂದ ಇದಕ್ಕಾಗಿ ಪೂರ್ವಭಾವಿ ಸಭೆ, ವಿವಿಧ ಸಮುದಾಯಗಳ ಮುಖಂಡರ ಭೇಟಿ ಮತ್ತು ಎಲ್ಲಾ ತಾಲ್ಲೂಕುಗಳಲ್ಲಿ ಸಮಾನ ಮನಸ್ಕರ ಸಭೆಯನ್ನು ಸಮಿತಿ ನಡೆಸಿದೆ. ಸಮಿತಿಯ ಪ್ರಧಾನ ಸಂಚಾಲಕರು, ಸಂಚಾಲಕರು, ಪದಾಧಿಕಾರಿಗಳು ಮತ್ತು ಎಲ್ಲಾ ಸದಸ್ಯರು, ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿವರ್ಗ ಹಾಗೂ ಹುಲಿನಾಯ್ಕರ್ ಅವರ ಕುಟುಂಬವರ್ಗ ನಿರಂತರವಾಗಿ ಶ್ರಮಿಸುತ್ತಿದ್ದಾರೆ.

"ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಾಡಲಿದ್ದಾರೆ. ಡಾ.ಎಂ.ಆರ್. ಹುಲಿನಾಯ್ಕರ್ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಕೃತಿಯನ್ನು ಕರ್ನಾಟಕ ಸರ್ಕಾರದ ಗೃಹಸಚಿವರಾದ ಡಾ.ಜಿ.ಪರಮೇಶ್ವರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ. ಈ ಕೃತಿಯನ್ನು ಡಾ.ಕೆ.ಆರ್.ಕಮಲೇಶ್ ಅವರು ನಿರೂಪಣೆ ಮಾಡಿದ್ದಾರೆ. ತುಮಕೂರಿನ ವಿಧಾನಸಭಾ ಸದಸ್ಯರಾದ ಜಿ.ಬಿ. ಜ್ಯೋತಿಗಣೇಶ್ ಅವರು ಮೊದಲ ಪ್ರತಿ ಸ್ವೀಕಾರ ಮಾಡುತ್ತಾರೆ. ಸಹಕಾರ ಸಚಿವರಾದ ಕೆ.ಎನ್.ರಾಜಣ್ಣ ಅವರು 'ಅಭಿನಂದನೆಯ ನುಡಿಗಳ'ನ್ನು ಆಡಲಿದ್ದಾರೆ. ಮೈಸೂರಿನಲ್ಲಿ ವಾಸವಿರುವ ಖ್ಯಾತ ವಿದ್ವಾಂಸರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕೃತಿ ಪರಿಚಯ ಮಾಡಿಕೊಡಲಿದ್ದಾರೆ. ಶ್ರೀದೇವಿ ಮೀಡಿಯಾ ಸೆಂಟರ್ ವತಿಯಿಂದ ಕಳೆದ ಒಂದು ವರ್ಷದಿಂದ ಪ್ರಕಟವಾಗುತ್ತಿರುವ 'ಶ್ರೀದೇವಿ ಅಂತರಂಗ' ಮಾಸಪತ್ರಿಕೆ ಎರಡನೆಯ ವರ್ಷದ ವಿಶೇಷ ಸಂಚಿಕೆಯನ್ನು ವಿಜಯವಾಣಿ ಪತ್ರಿಕೆಯ ಸಹಾಯಕ ಸಂಪಾದಕರಾದ ರುದ್ರಣ್ಣ ಹರ್ತಿಕೋಟೆ ಅವರು ಲೋಕಾರ್ಪಣೆ ಮಾಡಲಿದ್ದಾರೆ.

"ಶ್ರೀಕ್ಷೇತ್ರ ಕಾಗಿನೆಲೆ ಕನಕಗುರುಪೀಠದ ಜಗದ್ಗುರುಗಳಾದ ಪೂಜ್ಯ ಶ್ರೀನಿರಂಜನಾನಂದಪುರಿ ಮಹಾಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ಸಮಾರಂಭ ಜರುಗುತ್ತದೆ."

"ಶಿಕ್ಷಣ, ಆರೋಗ್ಯ ಮತ್ತು ಸಾರ್ವಜನಿಕ ಕ್ಷೇತ್ರಗಳಿಗೆ ಡಾ.ಎಂ.ಆರ್.ಹುಲಿನಾಯ್ಕರ್ ಅವರು ನೀಡಿದ ಅಮೂಲ್ಯ ಕೊಡುಗೆಯನ್ನು ಸ್ಮರಿಸಿ ಅಮೃತ ಮಹೋತ್ಸವ ಸಮಿತಿ ಡಾ.ಎಂ. ಆರ್.ಹುಲಿನಾಯ್ಕರ್ ಮತ್ತು ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರಿಗೆ ನಾಗರಿಕ ಸನ್ಮಾನ ಮಾಡುತ್ತಿದೆ.

"ಇದೊಂದು ಪಕ್ಷಾತೀತ ಮತ್ತು ಜಾತ್ಯತೀತ ಸಮಾರಂಭವಾಗಿದೆ. ಡಾ.ಹುಲಿನಾಯ್ಕರ್ ಯಸಸ್ವೀ ಸರ್ಜನ್ ಆಗಿ ತುಮಕೂರು ಜಿಲ್ಲೆಯ ಎಲ್ಲಾ ಜನರಿಗೂ ಬೇಕಾದವರಾಗಿದ್ದಾರೆ. ಅವರ ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರದ ಎಂಟು ಸಾವಿರ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ದೇಶದ ಕೌಶಲಾಧಾರಿತ ಮಾನವ ಸಂಪನ್ಮೂಲವನ್ನು ವೃದ್ಧಿಸುವಲ್ಲಿ ಡಾ.ಹುಲಿನಾಯ್ಕರ್ ಅವರ ಪಾತ್ರ ದೊಡ್ಡದು" ಎಂದು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಗಣ್ಯರು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಜಿ.ಪಂ. ಮಾಜಿ ಅಧ್ಯಕ್ಷ ವೈ. ಎಚ್. ಹುಚ್ಚಯ್ಯ, ಮೇಯರ್ ಪ್ರಭಾವತಿ ಸುದೀಶ್ವರ್, ಟೂಡಾ ಮಾಜಿ ಅಧ್ಯಕ್ಷರಾದ ರೆಡ್ಡಿ ಚಿನ್ನಯಲ್ಲಪ್ಪ, ಕೆಪಿಸಿಸಿ ವಕ್ತಾರ ಮುರಳೀಧರ ಹಾಲಪ್ಪ, ಉಪಮೇಯರ್ ಟಿ. ಕೆ.ನರಸಿಂಹಮೂರ್ತಿ, ಆಡಿಟರ್ ಸುಲ್ತಾನ್, ಪಾಲಿಕೆಯ ಸದಸ್ಯರಾದ ನಯಾಜ್ ಅಹಮದ್, ಫರೀದಾಬೇಗಂ, ಇಂದ್ರಕುಮಾರ್, ಸಿ. ಎನ್. ರಮೇಶ್, ಶ್ರೀನಿವಾಸ್, ಲಕ್ಷ್ಮಿನರಸಿಂಹರಾಜು ಮಲ್ಲಿಕಾರ್ಜುನಯ್ಯ, ಟಿ.ಎಚ್.ವಾಸುದೇವ್, ಡಿ. ಎಂ. ಸತೀಶ್, ಧನಿಯಾಕುಮಾರ್, ಶ್ರೀನಿವಾಸಪ್ರಸಾದ್, ಪಿ. ಮೂರ್ತಿ, ಡಾ. ರಮಣ್, ಎಂ. ಎಸ್. ಪಾಟೀಲ್, ಉಗಮಶ್ರೀನಿವಾಸ್, ಪುಟ್ಟರಾಜು, ಧರ್ಮರಾಜ್, ಚಂದ್ರ ಬಾಬು, ಮಲ್ಲಸಂದ್ರ ಶಿವಣ್ಣ, ಮುರಳಿ ಕೃಷ್ಣ, ಅತಿಉಲ್ಲ ಖಾನ್ ಅವರುಗಳು ಹಾಜರಿದ್ದರು.

■ ವರದಿ: ಎನ್.ಆನಂದ


## ಶ್ರೀದೇವಿ ಆಸ್ಪತ್ರೆಯಲ್ಲಿ ಕನಕದಾಸರ 536ನೇ ಜಯಂತಿ ಆಚರಣೆ

"ಕನಕದಾಸರು ಯಾವುದೇ ಒಂದು ಜಾತಿಗೆ ಸೀಮಿತರಾದವರಲ್ಲ, ಅವರು ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿದ್ದರು. ಅವರನ್ನು ನಾವು ಒಂದೊಂದು ಜಾತಿಗೆ ಸೀಮಿತಗೊಳಿಸಿ, ಅವರಿಗೆ ಸಂಕೋಲೆ ಹಾಕಿದ್ದೇವೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ಮತ್ತು ಕುವೆಂಪು ಅಂತಹವರನ್ನು ಜಾತಿಗೆ ಸೀಮಿತಗೊಳಿಸುವುದು ಮಹಾಪರಾಧ. ಮಹಾಪುರುಷರ ಜನ್ಮದಿನದಂದು ಅವರ ಆದರ್ಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಅವರ ಕೊಡುಗೆಗಳನ್ನು ಸ್ಮರಿಸಬೇಕು. ಕನಕದಾಸರ ಆಶಯದಂತೆ, ಭಾರತೀಯ ಸಮಾಜ ಕುಲಕುಲ ಎಂದು ಕಚ್ಚಾಡದೆ ಒಗ್ಗಟ್ಟಿನಿಂದ ಸಾಗಬೇಕು" ಎಂದು ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ ಹುಲಿನಾಯ್ಕರ್ ಅವರು ನ.30 ರಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ 536ನೇ ಕನಕದಾಸ ಜಯಂತಿ ಆಚರಣೆಯ ಸಂದರ್ಭದಲ್ಲಿ ಹೇಳಿದರು.

ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯರವರು ಮಾತನಾಡುತ್ತಾ "ಕನಕದಾಸರ ಸಾಮಾಜಿಕ ಧೋರಣೆಯು ಬಂಡಾಯದ ನೆಲೆಯನ್ನು ಧ್ವನಿಸುತ್ತದೆ. ಪುರೋಹಿತಶಾಹಿ ಶಕ್ತಿಗಳು ಶೂದ್ರರನ್ನು ಧರ್ಮದ ಹೆಸರಿನಲ್ಲಿ ದಿಕ್ಕು ತಪ್ಪಿಸುತ್ತಿರುವ ಹುನ್ನಾರಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಕನಕದಾಸರ ಜಾತ್ಯತೀತ ವಿಚಾರಗಳನ್ನು ತಿಳಿದು ಅದನ್ನು ಅನುಸರಿಸಬೇಕು" ಎಂದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆಯ ಸಿ.ಎ.ಓ. ಪ್ರದೀಪ್, ಸೂಪರ್‌ವೈಸರ್‌ರಾದ ರಾಮು, ಪ್ರದೀಪ್, ಶ್ರೀದೇವಿ ಆಸ್ಪತ್ರೆಯ ನರಸಪ್ಪ, ಭದ್ರತಾ ಸಿಬ್ಬಂದಿಯಾದ ಶ್ರೀಧರ್, ಹರೀಶ್ ಹಾಗೂ ವಿವಿಧ ವಿಭಾಗದ ವೈದ್ಯರು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.

■ ವರದಿ: ಎನ್.ಆನಂದ




**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**




ಚಿತ್ರಗಳು: ನವ್ಯ ಫೋಟೋಗ್ರಾಫಿ

# ಸಂಯಮ, ಪ್ರಾಮಾಣಿಕತೆ ಹಾಗೂ ದುಡಿಮೆ ಯಶಸ್ಸಿನ ತ್ರಿಮಂತ್ರಗಳು

**ಕರ್ನಾಟಕ ಸರ್ಕಾರದ ಗೃಹಸಚಿವರು ಮತ್ತು ತುಮಕೂರಿನ ಉಸ್ತುವಾರಿ ಸಚಿವರಾಗಿರುವ ಡಾ.ಜಿ.ಪರಮೇಶ್ವರ್ ಅವರು ಅಂತರಂಗದ ಅವಲೋಕನ ಕೃತಿಯನ್ನು ಲೋಕಾರ್ಪಣೆ ಮಾಡಿ "ಡಾ.ಹುಲಿನಾಯ್ಕರ್ ಅವರು ಸಾಮಾನ್ಯರೂ ಅತ್ಯುನ್ನತ ಸಾಧನೆ ಮಾಡಬಹುದು ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟಿದ್ದಾರೆ. ಬದುಕಿನಲ್ಲಿ ಸಂಯಮ, ಪ್ರಾಮಾಣಿಕತೆ ಮತ್ತು ದುಡಿಮೆಯನ್ನು ನೆಚ್ಚಿಕೊಂಡರೆ ವ್ಯಕ್ತಿ ಎಂತಹ ಸಾಧನೆ ಮಾಡಬಹುದು ಎಂಬುದಕ್ಕೆ ಡಾ. ಹುಲಿನಾಯ್ಕರ್ ಅವರು ಉದಾಹರಣೆಯಂತಿದ್ದಾರೆ." ಎಂದರು.**







2023ರ ನವೆಂಬರ್ 25ರಂದು ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಡಾ.ಎಂ.ಆರ್.ಹುಲಿನಾಯ್ಕರ್ ಅವರ 'ಅಂತರಂಗದ ಅವಲೋಕನ' ಆತ್ಮಕಥನದ ಲೋಕಾರ್ಪಣೆ ಮತ್ತು ಡಾ.ಎಂ.ಆರ್.ಹುಲಿನಾಯ್ಕರ್ ದಂಪತಿಗಳಿಗೆ ನಾಗರಿಕ ಸನ್ಮಾನವನ್ನು ಡಾ.ಎಂ.ಆರ್.ಹುಲಿನಾಯ್ಕರ್ ಅವರ ಅಮೃತ ಮಹೋತ್ಸವ ಸಮಿತಿ ಹಮ್ಮಿಕೊಂಡಿತ್ತು.

ಕರ್ನಾಟಕ ಸರ್ಕಾರದ ಗೃಹಸಚಿವರು ಮತ್ತು ತುಮಕೂರಿನ ಉಸ್ತುವಾರಿ ಸಚಿವರಾಗಿರುವ ಡಾ.ಜಿ.ಪರಮೇಶ್ವರ್ ಅವರು ಅಂತರಂಗದ ಅವಲೋಕನ ಕೃತಿಯನ್ನು ಲೋಕಾರ್ಪಣೆ ಮಾಡಿ "ಡಾ.ಹುಲಿನಾಯ್ಕರ್ ಅವರು ಸಾಮಾನ್ಯಡಿಗ ಅತ್ಯುನ್ನತ ಸಾಧನೆ ಮಾಡಬಹುದು ಎಂಬುದನ್ನು ತಮ್ಮ ಜೀವನದ ಮೂಲಕ ತೋರಿಸಿಕೊಟ್ಟಿದ್ದಾರೆ. ಬದುಕಿನಲ್ಲಿ ಸಂಯಮ, ಪ್ರಾಮಾಣಿಕತೆ ಮತ್ತು ದುಡಿಮೆಯನ್ನು ನೆಚ್ಚಿಕೊಂಡರೆ ವ್ಯಕ್ತಿ ಎಂತಹ ಸಾಧನೆ ಮಾಡಬಹುದು ಎಂಬುದಕ್ಕೆ ಡಾ. ಹುಲಿನಾಯ್ಕರ್ ಅವರು ಉದಾಹರಣೆಯಂತಿದ್ದಾರೆ. ನಾಲ್ಕು ದಶಕಗಳಲ್ಲಿ ತುಮಕೂರಿನ ಶೈಕ್ಷಣಿಕ, ಸಾಮಾಜಿಕ ಆರೋಗ್ಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಅವರು ಪವಾಡ ಸದೃಶವಾದ ಸಾಧನೆ ಮಾಡಿದ್ದಾರೆ. ಅವರು ಯುವ ಸರ್ಜನ್‌ಗಳಿಗೆ ಆದರ್ಶಪ್ರಾಯರು. ಉತ್ತಮ ಆಸ್ಪತ್ರೆ ನಿರ್ಮಿಸಬೇಕು ಎಂಬುವವರಿಗೆ ಅವರು ಮಾರ್ಗದರ್ಶಕರು. ಈ ಆಸ್ಪತ್ರೆಯನ್ನು ಹೇಗೆ ಜನಪರವಾಗಿ ರೂಪಿಸಬಹುದು ಎಂಬುದಕ್ಕೂ ಅವರೇ ಆದರ್ಶ. ವೈದ್ಯಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವವರು ಅವರ ಆದರ್ಶವನ್ನು ಅನುಸರಿಸಬೇಕು.

'ತುಮಕೂರಿನ ಶೈಕ್ಷಣಿಕ ಕ್ಷೇತ್ರದಲ್ಲಿ ಸಿದ್ಧಗಂಗೆಯ ಸಿದ್ಧಪುರುಷರಾದ ಪರಮ ಪೂಜ್ಯ ಡಾ.ಶಿವಕುಮಾರ ಸ್ವಾಮೀಜಿ ಹಾಗೂ ನಮ್ಮ ತಂದೆ ದಿವಂಗತ ಹೆಚ್.ಎಂ.ಗಂಗಾಧರಯ್ಯ ಅವರುಗಳು ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ ನಕ್ಷತ್ರದಂತೆ ಸದಾ ಬೆಳಗುತ್ತಿದ್ದಾರೆ. ಶ್ರೀ ಸಿದ್ಧಗಂಗಾ ಶಿಕ್ಷಣ ಸಂಸ್ಥೆ ಮತ್ತು ಶ್ರೀ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳು ಜಿಲ್ಲೆಯ ಮತ್ತು ರಾಜ್ಯದ ಶೈಕ್ಷಣಿಕ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆ ನೀಡಿವೆ. ಅವು ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಿವೆ. ಅವರ ಸಾಲಿಗೆ ಮತ್ತೊಬ್ಬರು ಇಂದು ಸೇರ್ಪಡೆಯಾಗಿದ್ದಾರೆ. ಅವರೇ ಶ್ರೀದೇವಿ ಶಿಕ್ಷಣ ಸಂಸ್ಥೆಯ ಪ್ರವರ್ತಕರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು. ಶ್ರೀಯುತರು ಅತ್ಯಲ್ಪ ಅವಧಿಯಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಸ್ವತಃ ವೈದ್ಯರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ ಆಸ್ಪತ್ರೆಯನ್ನು ಹೇಗೆ ಕಟ್ಟಬೇಕು ಎಂಬುದು ತಿಳಿದಿದೆ. ಶ್ರೀದೇವಿ ಆಸ್ಪತ್ರೆ ಬಡವರ ಪರವಾಗಿ ಕೆಲಸ ಮಾಡುತ್ತಿರುವುದು ಸಂತೋಷದ ವಿಚಾರ. ಡಾ.ಶಿವಕುಮಾರ ಸ್ವಾಮೀಜಿ, ಶಿಕ್ಷಣ ಭೀಷ್ಮ ಎಂದು ಖ್ಯಾತರಾಗಿರುವ ಹೆಚ್.ಎಂ.ಗಂಗಾಧರಯ್ಯ ಅವರ ಜೊತೆಗೆ ಇತಿಹಾಸ ಡಾ.ಎಂ.ಆರ್. ಹುಲಿನಾಯ್ಕರ್ ಅವರನ್ನು ಸ್ಮರಿಸುತ್ತದೆ.



'ಶ್ರೀದೇವಿ ಶಿಕ್ಷಣ ಸಂಸ್ಥೆ ಇಂದು ಖಾಸಗಿ ವಿಶ್ವವಿದ್ಯಾನಿಲಯವಾಗುವ ಎಲ್ಲಾ ಅರ್ಹತೆಯನ್ನು ಗಳಿಸಿಕೊಂಡು, ಅದು ಬೇಗ ಖಾಸಗಿ ವಿಶ್ವವಿದ್ಯಾನಿಲಯದ ಸ್ಥಾನಮಾನ ಪಡೆಯಲಿ ಎಂದು ಹಾರೈಸುತ್ತೇನೆ. ನಾನು 2000ದಲ್ಲಿ ಉನ್ನತ ಶಿಕ್ಷಣ ಸಚಿವನಾಗಿದ್ದಾಗ ತುಮಕೂರು ವಿಶ್ವವಿದ್ಯಾನಿಲಯವನ್ನು ಪ್ರಾರಂಭ ಮಾಡಿದ್ದೆ. ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಎನ್ನುವ ನನ್ನ ಆಲೋಚನೆಗೆ ಅಂದು ಉತ್ತಮ ಸ್ಪಂದನೆ ಬಂದಿರಲಿಲ್ಲ. ನಂತರ ಹೆಚ್ಚಿನ ಜಿಲ್ಲೆಗಳಲ್ಲಿ ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗುವುದರ ಮೂಲಕ ನನ್ನ ಚಿಂತನೆ ಕಾರ್ಯರೂಪಕ್ಕೆ ಬಂದಿರುವುದು ಸಂತೋಷ ತಂದಿದೆ.

'ಡಾ.ಎಂ.ಆರ್.ಹುಲಿನಾಯ್ಕರ್ ಅವರು ದಿವಂಗತ ಹೆಚ್.ಎಂ.ಗಂಗಾಧರಯ್ಯ ಅವರ ವ್ಯಕ್ತಿತ್ವದಿಂದ ಪ್ರೇರಣೆ ಪಡೆದುಕೊಂಡಿರುವ ವಿಚಾರವನ್ನು ಪ್ರಸ್ತಾಪಿಸಿ, ಅದನ್ನು ಗ್ರಂಥದಲ್ಲಿ ದಾಖಲು ಮಾಡಿರುವುದಾಗಿಯೂ ಹೇಳಿದ್ದಾರೆ. ನಿರ್ಮಲ ಮನಸ್ಸಿನ ವ್ಯಕ್ತಿಯ ಲಕ್ಷಣವೇ ಹಾಗೆ. ಎಲ್ಲಿ ಒಳ್ಳೆಯ ವಿಚಾರಗಳಿದ್ದರೂ ಅವರು ಅದನ್ನು ಪಡೆದುಕೊಂಡು ಸಮಾಜಕ್ಕೆ ಉತ್ತಮ ಕಾಣಿಕೆ ಕೊಡುತ್ತಾರೆ. ಆ ಪರಂಪರೆಗೆ ಸೇರಿದವರು ಡಾ. ಹುಲಿನಾಯ್ಕರ್ ಅವರು.

'ತುಮಕೂರು ಜಿಲ್ಲೆ ಉತ್ತಮ ಶಿಕ್ಷಣ ಸಂಸ್ಥೆಗಳಿಗೆ ಕಳೆದ ಐವತ್ತು ವರ್ಷಗಳಿಂದ ಪ್ರಸಿದ್ಧವಾಗಿದೆ. ಇಲ್ಲಿ ವ್ಯಾಸಂಗ ಮಾಡಿದ ಮಕ್ಕಳು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರೇ ನಮ್ಮ ರಾಯಭಾರಿಗಳು. ದೇಶದ ಮಾನವ ಸಂಪನ್ಮೂಲ ಕ್ಷೇತ್ರಕ್ಕೆ ಈ ಜಿಲ್ಲೆಯ ಕೊಡುಗೆ ದೊಡ್ಡ ಪ್ರಮಾಣದಲ್ಲಿದೆ. ಅದರಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆಯ ಪಾಲಿರುವುದು ಸಂತೋಷದ ವಿಚಾರ" ಎಂದರು.

ಸಮಾರಂಭದ ಉದ್ಘಾಟನೆ ಮಾಡಿದ ಮಾಜಿ ಮುಖ್ಯಮಂತ್ರಿಗಳು ಮತ್ತು ರಾಜ್ಯದ ಹಿರಿಯ ನಾಯಕರಾದ ಬಿ.ಎಸ್.ಯಡಿಯೂರಪ್ಪ ಅವರು ಮಾತನಾಡುತ್ತಾ "ಡಾ.ಹುಲಿನಾಯ್ಕರ್ ಅವರು ಅಪಾರವಾದ ದೈವಭಕ್ತರು. ಅವರಿಗೆ ಗುರು ಹಿರಿಯರಲ್ಲಿ ಶ್ರದ್ಧೆಯಿರುವುದು ನನಗೆ ಸಂತೋಷ ತಂದಿದೆ. ನನ್ನ ಮತ್ತು ಅವರ ಸಂಬಂಧ ರಾಜಕಾರಣವನ್ನು ಮೀರಿದ್ದು. ಈ ಆತ್ಮೀಯ ಸಂಬಂಧದಿಂದಾಗಿ ಅವರಲ್ಲಿ





ನನಗೆ ವಿಶೇಷವಾದ ಮಮತೆಯಿದೆ. ಅವರ ಶುದ್ಧ ಸ್ನೇಹ ಸ್ವಭಾವ ಮತ್ತು ಅಹಂಕಾರವಿಲ್ಲದ ಮೃದು ವ್ಯಕ್ತಿತ್ವ ಅವರನ್ನು ಮತ್ತಷ್ಟು ಕ್ರಿಯಾಶೀಲರಾಗಿರುವಂತೆ ಮಾಡುತ್ತದೆ" ಎಂದರು.

ಡಾ.ಎಂ.ಆರ್.ಹುಲಿನಾಯ್ಕರ್ ಅವರಿಗೆ ಅಭಿನಂದನೆಯ ನುಡಿಗಳನ್ನು ಆಡಿದ, ಕರ್ನಾಟಕ ಸರ್ಕಾರದಲ್ಲಿ ಸಹಕಾರ ಸಚಿವರು ಮತ್ತು ಹಾಸನ ಜಿಲ್ಲಾ ಉಸ್ತುವಾರಿ ಸಚಿವರಾಗಿರುವ ಕೆ.ಎನ್.ರಾಜಣ್ಣ "ಡಾ. ಹುಲಿನಾಯ್ಕರ್ ಅವರಲ್ಲಿ ಉಪಕಾರ ಸ್ಮರಣೆಯ ಅಪರೂಪದ ಗುಣವಿದೆ. ಬಹಳ ಜನರಿಗೆ ಉಪಕಾರ ಮಾಡಿಸಿಕೊಳ್ಳುವಾಗಿದ್ದ ಮನಸ್ಥಿತಿ ಅನಂತರ ಇರುವುದಿಲ್ಲ. ಅವರು ಉಪಕಾರ ಪಡೆದಿದ್ದನ್ನು ಬೇಗ ಮರೆತು ಬಿಡುತ್ತಾರೆ. ಈಗ ಅಂತಹವರ ಸಂಖ್ಯೆ ಹೆಚ್ಚು. ಆದರೆ ಡಾ.ಹುಲಿನಾಯ್ಕರ್ ಅದಕ್ಕೆ ಅಪವಾದದಂತಿದ್ದಾರೆ. ಅವರ ಗ್ರಂಥದಲ್ಲಿ ತಮಗೆ ಉಪಕಾರ ಮಾಡಿದ ಎಲ್ಲರನ್ನೂ ಜ್ಞಾಪಿಸಿಕೊಂಡಿದ್ದಾರೆ. ಇದು ಅವರ ಸಂಸ್ಕಾರವನ್ನು ತೋರಿಸುತ್ತದೆ.

ನಾಲ್ಕು ದಶಕಗಳ ಹಿಂದೆ ಇಲ್ಲಿ ಡಾ.ಹುಲಿನಾಯ್ಕರ್ ಶಿಕ್ಷಣ ಸಂಸ್ಥೆ ಸ್ಥಾಪನೆ ಮಾಡುತ್ತೇನೆ ಎಂದರೆ ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಒಂದಾಗಿ ಕೊಡಬಾರದ ತೊಂದರೆ ಕೊಟ್ಟರು. ನಾನು ಮತ್ತು ರೆಡ್ಡಿ ಚಿನ್ನಯೆಲಪ್ಪ ಅವರ ಸಹಾಯ ಬಂದೆವು. ಅದಕ್ಕೆ ಕಾರಣವಿಷ್ಟೇ. ಶಿರಾ ಗೇಟ್‌ನ ಭಾಗ ಮೊದಲಿನಿಂದಲೂ ಹಿಂದುಳಿದ ಪ್ರದೇಶ. ಇಲ್ಲಿ ಶಾಲಾ ಕಾಲೇಜು ಪ್ರಾರಂಭವಾದರೆ ಆರ್ಥಿಕ ಚಟುವಟಿಕೆಗಳು ನಡೆದು ಈ ಪ್ರದೇಶದಲ್ಲಿ ಉದ್ಯೋಗಾವಕಾಶ ಹೆಚ್ಚುತ್ತದೆ. ಇಲ್ಲಿ ಹಿಂದುಳಿದವರು ಮತ್ತು ಬಡವರೇ ಹೆಚ್ಚಾಗಿರುವುದು. ನಮ್ಮ ಆಲೋಚನೆಗೆ ತಕ್ಕಂತೆ ಈ ಪ್ರದೇಶ ಅಭಿವೃದ್ಧಿಯಾಗಿದೆ. ಇದಕ್ಕೆ ಕಾರಣಕರ್ತರು ಡಾ.ಹುಲಿನಾಯ್ಕರ್ ಅವರು. ಅವರನ್ನು ಇಂದು ಅಭಿನಂದಿಸುತ್ತೇನೆ. ಈ ಸಂಸ್ಥೆ ಆರ್ಥಿಕ ಸಂಕಷ್ಟದಲ್ಲಿದ್ದಾಗ ನಾನು ಸಹಾಯ ಮಾಡಲು ಅಂದಿನ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಕಾರಣರಾಗಿದ್ದಾರೆ. ಡಾ. ಹುಲಿನಾಯ್ಕರ್ ಅವರ ಹೆಸರಿನ ಮುಂದೆ 'ಹುಲಿ' ಇದೆ. ಅದು ಸರಿಯಲ್ಲ. ಅವರು ಸೌಮ್ಯ ಸ್ವಭಾವದವರು. ಅವರ ಶ್ರೀಮತಿ ಹೆಸರಿನ ಮುಂದೆ 'ಶಾಂತಾ' ಎಂದಿದೆ. ಅದು ಸರಿಯಿದೆ. ಈ ದಂಪತಿಗಳು ತಮ್ಮ ಇಡೀ ಬದುಕನ್ನು ಆರೋಗ್ಯ ಸೌಕರ್ಯ ಕಲ್ಪಿಸುವುದಕ್ಕೆ ಮತ್ತು ಶಿಕ್ಷಣ ಪ್ರಸಾರಕ್ಕೆ ಮೀಸಲಿಟ್ಟಿರುವುದು ಸಂತೋಷದ ವಿಚಾರ. ನೂರಾರು ಕುಟುಂಬಗಳಿಗೆ ಅನ್ನದಾತರಾಗಿದ್ದಾರೆ. ಸಾವಿರಾರು ಮಕ್ಕಳು ಇಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. ಇಂತಹ ಕ್ರಿಯಾಶೀಲ ವ್ಯಕ್ತಿಯಿಂದಾಗಿ ಶ್ರೀದೇವಿ ಶಿಕ್ಷಣ ಸಂಸ್ಥೆ ಮುಂದಿನ ದಿನಗಳಲ್ಲಿ ಮತ್ತಷ್ಟು ಎತ್ತರಕ್ಕೆ ಬೆಳೆಯುತ್ತದೆ. ನನಗೆ ಆ ವಿಶ್ವಾಸವಿದೆ" ಎಂದರು.

ಅಂತರಂಗದ ಅವಲೋಕನ ಕೃತಿಯನ್ನು ಪರಿಚಯ ಮಾಡಿಕೊಟ್ಟ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು "ಡಾ.ಎಂ.ಆರ್. ಹುಲಿನಾಯ್ಕರ್ ಅವರ ಅಂತರಂಗದ ಅವಲೋಕನ ಕೃತಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವೆನಿಸುವ ಕೃತಿಯಾಗಿದೆ. ಅವರು ವೈದ್ಯರು, ಸರ್ಜನ್, ಶಿಕ್ಷಣ ಸಂಸ್ಥೆಯ ಸ್ಥಾಪಕರು, ಹಿಂದುಳಿದ ವರ್ಗದ ಸಂಘಟನಕಾರರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು, ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿಯುಳ್ಳವರು, ವಿವಿಧ ನೆಲೆಗಳಲ್ಲಿ ಸಮಾಜವನ್ನು ಅಧ್ಯಯನ ಮಾಡಬಲ್ಲ ಸಮಾಜ ವಿಜ್ಞಾನಿಗಳು, ಪ್ರವಾಸಿಗರಾಗಿ ಸ್ಥಳದ ಮಹಿಮೆಯನ್ನು ಹೇಳುವವರು, ಮನುಷ್ಯನ ವಿವಿಧ ಮುಖಗಳನ್ನು ಮೌಲ್ಯಮಾಪನ ಮಾಡುವವರು, ಕುಟುಂಬದ ಹಿರಿಯ ವ್ಯಕ್ತಿಯಾಗಿ ಅಲ್ಲಿನ ಸದಸ್ಯರಿಗೆ ಮಾರ್ಗದರ್ಶನ ನೀಡುವವರು, ಸ್ನೇಹಿತರು ಮತ್ತು ಬಂಧುಗಳಿಗೆ ಅಪದ್ಭಾಂದವರು, ಧಾರ್ಮಿಕ ಕಾರ್ಯಗಳಲ್ಲಿ ಒಲವುಳ್ಳವರು, ಅಧ್ಯಾತ್ಮ ಸಾಧಕರು – ಈ ಎಲ್ಲಾ ಸಂಗತಿಗಳಿಗೂ ಈ ಗ್ರಂಥದಲ್ಲಿ ಸಾಕ್ಷ್ಯ ಸಿಗುತ್ತದೆ. ಇಂತಹ ವೈವಿಧ್ಯತೆಯುಳ್ಳ ವ್ಯಕ್ತಿಯನ್ನು ಕಾಣುವುದು ತುಂಬಾ ಅಪರೂಪ. ಡಾ.ಹುಲಿನಾಯ್ಕರ್ ಕನ್ನಡನಾಡಿನ ಆಸ್ತಿ" ಎಂದು ಡಾ.ಹುಲಿನಾಯ್ಕರ್ ಅವರ ವ್ಯಕ್ತಿತ್ವವನ್ನು ವಿಶ್ಲೇಷಣೆ ಮಾಡಿದರು.

ಶ್ರೀದೇವಿ ಶಿಕ್ಷಣ ಸಂಸ್ಥೆಯ ಮಾಧ್ಯಮ ಸೆಂಟರ್‌ನಿಂದ ಕಳೆದ ಒಂದು ವರ್ಷದಿಂದ ಪ್ರಕಟವಾಗುತ್ತಿರುವ ಶ್ರೀದೇವಿ ಅಂತರಂಗ ಮಾಸ ಪತ್ರಿಕೆಯ ಎರಡನೆಯ ವರ್ಷದ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿದ ವಿಜಯವಾಣಿ ಪತ್ರಿಕೆಯ ಸಹಾಯಕ ಸಂಪಾದಕರಾದ ರುದ್ರಣ್ಣ ಹರ್ತಿಕೋಟೆ ಅವರು "ನಾನು ಊರಿಗೆ ಹೋಗುತ್ತಿರುವಾಗ ಶ್ರೀದೇವಿ ಶಿಕ್ಷಣ ಸಂಸ್ಥೆಯ ಮುಂದೆ ಹಾದು ಹೋಗುತ್ತಿದ್ದೆ. ಎಂದೂ ಒಳಗೆ ಬಂದಿರಲಿಲ್ಲ. ಇಂದು ಒಳಗೆ ಬರುವ ಅವಕಾಶ ದೊರಕಿದೆ. ಇಲ್ಲಿಗೆ ಬಂದು ಡಾ.ಎಂ.ಆರ್.ಹುಲಿನಾಯ್ಕರ್ ಮಾಡಿರುವ ಕಾರ್ಯಗಳನ್ನು ನೋಡಿದಾಗ ಆಶ್ಚರ್ಯಚಕಿತನಾಗಿದ್ದೇನೆ. ಇಲ್ಲಿ ವ್ಯಾಸಂಗ ಮಾಡುವ ಮಕ್ಕಳು ತುಂಬಾ ಅದೃಷ್ಟವಂತರು. ಅವರಿಗೆ ಆಯ್ಕೆಗೆ ಸಾಕಷ್ಟು ಅವಕಾಶಗಳಿವೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳಿಗೆ ಇಂತಹ ಅವಕಾಶ ಕಲ್ಪಿಸುವುದು ಅಗತ್ಯವಿದೆ. ಡಾ.ಹುಲಿನಾಯ್ಕರ್ ಅವರು ಏಕಾಂಗಿಯಾಗಿ ಈ ಕೆಲಸ ಮಾಡಿರುವುದನ್ನು ನೋಡಿದಾಗ ಅವರ ಸಾಹಸ ನಿಜಕ್ಕೂ ಶ್ಲಾಘನೀಯವಾದದ್ದು. ಪ್ರಾಮಾಣಿಕವಾದ ದುಡಿಮೆಯಿದ್ದರೆ ಆತ ಏನನ್ನು ಬೇಕಾದರೂ ಸಾಧಿಸಬಹುದು ಎಂಬುದಕ್ಕೆ ಡಾ.ಹುಲಿನಾಯ್ಕರ್ ಬದುಕು ಸಾಕ್ಷಿಯಾಗಿದೆ. ಅವರು ಎಲ್ಲಾ ರೀತಿಯ ಅಭಿನಂದನೆಗೂ ಪಾತ್ರರು.

'ಕಳೆದ ಒಂದು ವರ್ಷದಿಂದ 'ಶ್ರೀದೇವಿ ಅಂತರಂಗ' ಮಾಸಪತ್ರಿಕೆಯನ್ನು ಗಮನಿಸುತ್ತಾ ಬಂದಿದ್ದೇನೆ. ಡಾ.ಎಂ.ಆರ್.ಹುಲಿನಾಯ್ಕರ್ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಈ ಪತ್ರಿಕೆಯಲ್ಲಿ ಶೈಕ್ಷಣಿಕ ಮಹತ್ವವುಳ್ಳ ಸುದ್ದಿಗಳು ಮತ್ತು ಲೇಖನಗಳು ಪ್ರಕಟವಾಗುತ್ತಿವೆ. ಪ್ರತಿ ಸಂಚಿಕೆಯಲ್ಲೂ ಆರೋಗ್ಯ ಕುರಿತಾದ ಮಹತ್ವದ ಲೇಖನವನ್ನು ನೋಡಬಹುದು. ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವವರಿಗೆ ಇಲ್ಲಿನ ಅನೇಕ ಲೇಖನಗಳು ಮಾರ್ಗದರ್ಶನ ಮಾಡುತ್ತವೆ.

'ಡಾ.ಎಂ.ಆರ್.ಹುಲಿನಾಯ್ಕರ್ ಅವರ ನಿರ್ಮಲ ಮನಸ್ಸಿಗೆ ಇಂದಿನ ಸಂಚಿಕೆಯಲ್ಲಿ ಪ್ರಕಟವಾಗಿರುವ ದಕ್ಷಿಣ ಆಫ್ರಿಕಾದ ಮಹಾನ್ ಸಾಧಕ ಹ್ಯಾಮಿಲ್ಟನ್ ಮತ್ತು ಶ್ರೀದೇವಿ ಆಸ್ಪತ್ರೆಯ O.T.ಯಲ್ಲಿ ಸಹಾಯಕನಾಗಿದ್ದ ದಿವಂಗತ ಟಿ.ಆರ್.ಪ್ರತಾಪನ ವಿಚಾರಗಳೇ ಸಾಕ್ಷಿಯಾಗಿವೆ. ಈ ಇಬ್ಬರಿಗೂ ವೈದ್ಯಕೀಯ ಪದವಿಗಳಿಲ್ಲ. ಸ್ವಯಂ ಆಸಕ್ತಿಯಿಂದ ಅವರು ತಮ್ಮ ಕ್ಷೇತ್ರದಲ್ಲಿ ಪ್ರಾವೀಣ್ಯತೆ ಸಾಧಿಸಿದ್ದಾರೆ. ಶೈಕ್ಷಣಿಕ ಅರ್ಹತೆಗಿಂತ ಕೌಶಲ್ಯಕ್ಕೆ ಹೆಚ್ಚಿನ ಮಹತ್ವವಿದೆ ಎಂದು ಈ ಲೇಖನ ಹೇಳುತ್ತದೆ. ಯುವ ಜನಾಂಗದಲ್ಲಿ ಆತ್ಮವಿಶ್ವಾಸ ಮೂಡಿಸಲು ಇಂತಹ ಲೇಖನಗಳು ಹೆಚ್ಚಾಗಿ ಪ್ರಕಟವಾಗಬೇಕು.

'ಈ ಸಂಚಿಕೆಯಲ್ಲಿ ಡಾ.ಹುಲಿನಾಯ್ಕರ್ ವ್ಯಕ್ತಿತ್ವ ಕುರಿತು ಸಂಸ್ಥೆಯ ಹಿರಿಯ ವ್ಯಕ್ತಿಗಳು ತುಂಬಾ ಚೆನ್ನಾಗಿ ಮಾತನಾಡಿದ್ದಾರೆ. ಡಾ.ಹುಲಿನಾಯ್ಕರ್ ತಮ್ಮ ಪ್ರಧಾನ ಸಂಪಾದಕರ ಅಂತರಂಗದಲ್ಲಿ, ಬೆಳಗಾವಿ ಕರ್ನಾಟಕದಲ್ಲಿ ಉಳಿಯಲು ದೇವರಾಜ ಅರಸು ಅವರ ಕೊಡುಗೆಯನ್ನು ಅರ್ಥಪೂರ್ಣವಾಗಿ ಸ್ಮರಿಸಿದ್ದಾರೆ. ಪತ್ರಿಕೆ ಮುದ್ರಣ ಚೆನ್ನಾಗಿದೆ. ಕಾಗದ ಸಹ ಉತ್ತಮವಾಗಿದೆ. ಇಂದು ಪತ್ರಿಕೆಯನ್ನು ಹೊರತರುತ್ತಿರುವುದೇ ಸಾಹಸದ ಕೆಲಸ. ಪೇಪರ್‌ಗೆ ಜಿ.ಎಸ್.ಟಿ. ಹಾಕಿ ಪತ್ರಿಕೆ ನಡೆಸಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಅಂತಹ ಸಂದರ್ಭದಲ್ಲಿ ಡಾ.ಹುಲಿನಾಯ್ಕರ್ ಅವರ ಈ ಕಾರ್ಯ ಪ್ರಶಂಸೆಗೆ ಅರ್ಹವಾಗಿದೆ" ಎಂದರು.

ಶ್ರೀಕ್ಷೇತ್ರ ಕಾಗಿನೆಲೆಯ ಕನಕಗುರುಪೀಠದ ಜಗದ್ಗುರುಗಳಾದ ಪೂಜ್ಯ ಶ್ರೀನಿರಂಜನಾನಂದ ಪುರಿ ಮಹಾಸ್ವಾಮಿಗಳು ಆಶೀರ್ವಚನವನ್ನು ನೀಡಿ "ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿಯಲ್ಲಿ ಜನಿಸಿದ ಡಾ.ಹುಲಿನಾಯ್ಕರ್ ಅವರು ತುಮಕೂರಿಗೆ ಬಂದು ಇಲ್ಲಿ 800 ಹಾಸಿಗೆಯ ಆಸ್ಪತ್ರೆ ಮತ್ತು ಅನೇಕ ಶಾಲಾ ಕಾಲೇಜುಗಳನ್ನು ಪ್ರಾರಂಭಿಸಿ ಜನಪ್ರಿಯರಾಗಿರುವುದು ನಮಗೆ ಸಂತೋಷದ ವಿಚಾರವಾಗಿದೆ. ಹಾಲುಮತ ಸಮುದಾಯ ಸದಾ ಸಮಾಜ ಏಳಿಗೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡುತ್ತದೆ ಎಂಬುದಕ್ಕೆ ಡಾ.ಹುಲಿನಾಯ್ಕರ್ ಅವರ ಬದುಕು ಉದಾಹರಣೆಯಾಗಿದೆ. ಈ ಸಮುದಾಯದ ಕನಕದಾಸರು, ಸಂಗೊಳ್ಳಿ ರಾಯಣ್ಣ, ಅಹಲ್ಯಾಬಾಯಿ ಹೋಲ್ಕರ್, ಇಟಗಿ ಭೀಮಾಂಬಿಕೆ, ಸಜ್ಜಲ ಗುಡ್ಡದ ಶರಣಮ್ಮ ಮೊದಲಾದವರಂತೆ ಡಾ.ಹುಲಿನಾಯ್ಕರ್ ಸಹ ಶಿಕ್ಷಣ ಮತ್ತು ಆರೋಗ್ಯಕ್ಷೇತ್ರದಲ್ಲಿನ ಸೇವೆಗಾಗಿ ಇಡೀ ರಾಜ್ಯದಲ್ಲಿ ಪ್ರಸಿದ್ಧರಾಗುತ್ತಾರೆ. ಇಷ್ಟಾದರೂ ಅವರ ಕೆಲಸ ಯಾವುದೇ ನಿರ್ದಿಷ್ಟ ಸಮುದಾಯಕ್ಕೆ ಸೇರದೆ ಇಡೀ ಸಮಾಜಕ್ಕೆ ಸಂದಾಯವಾಗಿರುವುದು ಸಂತೋಷದ ವಿಚಾರ. ಅವರು ಮುಂದಿನ ದಿನಗಳಲ್ಲಿ ಮತ್ತಷ್ಟು ಪುರೋಭಿವೃದ್ಧಿಗೆ ಬರಲಿ" ಎಂದರು.

ಅಂತರಂಗದ ಅವಲೋಕನ ಕೃತಿಯ ನಿರೂಪಕರಾದ ಡಾ.ಕೆ.ಆರ್.ಕಮಲೇಶ್ ಮತ್ತು ಅವರ ಮಡದಿ ಶ್ರೀಮತಿ ಎನ್.ಭಾರತಿ ಅವರಿಗೆ ಅಮೃತಮಹೋತ್ಸವ ಸಮಿತಿಯಿಂದ ಸನ್ಮಾನ ಮಾಡಲಾಯಿತು.

ಡಾ.ಎಂ.ಆರ್. ಹುಲಿನಾಯ್ಕರ್ ಅಮೃತ ಮಹೋತ್ಸವ ಸಮಿತಿಯ ಪರವಾಗಿ ನಂದಿ, ಗಜಲಕ್ಷ್ಮೀ, ಭಿನ್ನವತ್ತಳೆ, ಫಲ, ಪುಷ್ಪಗಳನ್ನು ನೀಡಿ ಡಾ.ಹುಲಿನಾಯ್ಕರ್ ದಂಪತಿಗಳನ್ನು ಸನ್ಮಾನಿಸಲಾಯಿತು. ಡಾ.ಸಿ. ನಾಗರಾಜ್ ಅವರು ಭಿನ್ನವತ್ತಳೆಯನ್ನು ಓದಿದರು.

ಡಾ.ಹುಲಿನಾಯ್ಕರ್ ಅವರು ತಮ್ಮ ಶ್ರೇಯಸ್ಸಿಗೆ ಕಾರಣರಾದ ಎಲ್ಲರಿಗೂ ಧನ್ಯವಾದಗಳನ್ನು ಹೇಳಿದರು. ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷರಾದ ಎಸ್.ನಾಗಣ್ಣ ಅವರು ಸ್ವಾಗತ ಕೋರಿದರು. ಕೊನೆಯಲ್ಲಿ ಗೌರವಾಧ್ಯಕ್ಷರಾದ ಟಿ.ಆರ್.ಆಂಜನಪ್ಪ ಅವರು ವಂದನಾರ್ಪಣೆ ಮಾಡಿದರು.



■ ವರದಿ: ಎನ್.ಭಾರತಿ



# ಬಹುಕಾಲ ನೆನಪಿನಲ್ಲಿ ಉಳಿಯುವ ಸಮಾರಂಭ

ತುಮಕೂರಿನ ಶ್ರೀದೇವಿ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಕಾಲೇಜಿನ ಸಭಾಂಗಣದಲ್ಲಿ ಡಿಸೆಂಬರ್ 2ರಂದು ಅಪರೂಪದ ಸಮಾರಂಭವನ್ನು ವ್ಯವಸ್ಥೆ ಮಾಡಲಾಗಿತ್ತು. ನವೆಂಬರ್ 25ರಂದು ಶ್ರೀದೇವಿ ಆಸ್ಪತ್ರೆ ಮತ್ತು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕರಾದ ಡಾ.ಎಂ.ಆರ್.ಹುಲಿನಾಯ್ಕರ್ ಅವರು 75ವರ್ಷ ಪೂರ್ಣಗೊಳಿಸಿದ ಸಂದರ್ಭದಲ್ಲಿ ಅವರ ಆತ್ಮಕಥನ 'ಅಂತರಂಗದ ಅವಲೋಕನ' ಕೃತಿಯ ಲೋಕಾರ್ಪಣೆ ಮತ್ತು ಡಾ.ಹುಲಿನಾಯ್ಕರ್ ದಂಪತಿಗಳಿಗೆ ನಾಗರಿಕ ಸನ್ಮಾನವನ್ನು ಏರ್ಪಡಿಸಲಾಗಿತ್ತು. ಡಾ.ಎಂ.ಆರ್. ಹುಲಿನಾಯ್ಕರ್ ಅಮೃತ ಮಹೋತ್ಸವ ಸಮಿತಿ ರಚನೆಯಾಗಿ, ಅದರ ಅಧ್ಯಕ್ಷರಾಗಿ ಪ್ರಜಾಪ್ರಗತಿ ಪತ್ರಿಕೆಯ ಸಂಪಾದಕರಾದ ಎಸ್.ನಾಗಣ್ಣ, ಗೌರವಾಧ್ಯಕ್ಷರಾಗಿ ಟಿ.ಆರ್.ಆಂಜನಪ್ಪ ಮತ್ತು ಪ್ರಧಾನ ಸಂಚಾಲಕರಾಗಿ ಟಿ.ಎನ್.ಮಧುಕರ ಅವರುಗಳು ನೇಮಕಗೊಂಡರು. ಇದಕ್ಕಾಗಿ ಬೃಹತ್ ಸ್ವಾಗತ ಸಮಿತಿ ಸಹ ರಚನೆಯಾಗಿತ್ತು.

ಅಂತರಂಗದ ಅವಲೋಕನ ಕೃತಿಯ ಲೋಕಾರ್ಪಣೆ ಮತ್ತು ಡಾ.ಹುಲಿನಾಯ್ಕರ್ ದಂಪತಿಗಳಿಗೆ ನಾಗರಿಕ ಸನ್ಮಾನಕ್ಕೆ ತುಮಕೂರು ಜಿಲ್ಲೆಯ ಎಲ್ಲಾ ಭಾಗದಿಂದ ಮತ್ತು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನಿಂದ ಸಹೃದಯತೆಯುಳ್ಳ ಸಾವಿರಾರು ಜನರು ಬಂದಿದ್ದರು. ಸುಮಾರು ಹತ್ತು ಸಾವಿರ ಜನ ಪುಸ್ತಕ ಬಿಡುಗಡೆ ಮತ್ತು ನಾಗರಿಕ ಸನ್ಮಾನ ಸಮಾರಂಭಕ್ಕೆ ಆಗಮಿಸಿದ್ದು ಸಾರ್ವಕಾಲಿಕ ಐತಿಹಾಸಿಕ ದಾಖಲೆ ಎಂದು ಹಿರಿಯರೊಬ್ಬರು ಹೇಳುತ್ತಿದ್ದರು. ಆಗಮಿಸಿದ ಜನರಲ್ಲಿ ತುಂಬಾ ವೈಶಿಷ್ಟ್ಯವಿರುವುದನ್ನು ಸಹ ಪ್ರಜ್ಞಾವಂತರು ಗುರುತಿಸಿದ್ದರು.

ಎಲ್ಲ ಅತಿಥಿಗಳು ಸಮಾರಂಭಕ್ಕೆ ಆಗಮಿಸಿ, ತಮ್ಮ ಕರ್ತವ್ಯಗಳನ್ನು ಅಚ್ಚುಕಟ್ಟಾಗಿ ಮಾಡಿದ್ದರು. ನವೆಂಬರ್ 25ರಂದು ಬೆಳಗ್ಗೆ 11.30ಕ್ಕೆ ಪ್ರಾರಂಭವಾದ ಸಮಾರಂಭ ಮಧ್ಯಾಹ್ನ 2.30ರ ತನಕ ನಿರಂತರವಾಗಿ ಮುಂದುವರಿಯಿತು. ಸೇರಿದ್ದ ಜನರು ಅಷ್ಟು ಹೊತ್ತಾದರೂ ಅತ್ತಿತ್ತ ಕದಲದೆ ಸಕ್ರಿಯವಾಗಿ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಸಮಾರಂಭದ ನಂತರ ಡಾ.ಹುಲಿನಾಯ್ಕರ್ ದಂಪತಿಗಳಿಗೆ ಸನ್ಮಾನ ಕಾರ್ಯಕ್ರಮವಿದ್ದು, ಅದು ಸಂಜೆ 7.30ರ ತನಕ ಮುಂದುವರಿದಿತ್ತು.

ಜನಸಾಗರವೇ ಸೇರಿದ್ದರೂ ಭೋಜನಶಾಲೆಯಲ್ಲಿ ನೂಕು ನುಗ್ಗಲು ಇರಲಿಲ್ಲ. ಯಥೇಚ್ಛ ಸಂಖ್ಯೆಯಲ್ಲಿ ಆಹಾರ ನೀಡುವ ಕೌಂಟರ್‌ಗಳಿದ್ದವು. ಅಲ್ಲಿನ ವಿದ್ಯಾರ್ಥಿನಿಲಯಗಳಲ್ಲಿ, ಹೋದವರಿಗೆ ಊಟ ಕೊಡುವ ವ್ಯವಸ್ಥೆ ಮಾಡಲಾಗಿತ್ತು. ಯುವಕ\ ಯುವತಿಯರು, ಮಹಿಳೆಯರು, ಮಕ್ಕಳಿಗೆ ಹಾಗೂ ಹಿರಿಯ ನಾಗರಿಕರಿಗೆ ಆದ್ಯತೆ ಕೊಡುತ್ತಿದ್ದ ದೃಶ್ಯ ನೆನಪಿನಲ್ಲಿ ಉಳಿಯುವಂತಹುದು.

ಇನ್ನು ವೇದಿಕೆಯ ಕಾರ್ಯಕ್ರಮವನ್ನು ತುಂಬಾ ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದ ನಿರೂಪಣೆಯನ್ನು ನಿರೂಪಣೆಯಲ್ಲಿ ರಾಷ್ಟ್ರೀಯ ಖ್ಯಾತಿ ಪಡೆದಿರುವ ಶಂಕರ್ ಪ್ರಕಾಶ್ ನಿರ್ವಹಣೆ ಮಾಡಿದರು. ಶ್ರೀದೇವಿ ವೈದ್ಯಕೀಯ ಕಾಲೇಜಿನ ಉಪ ಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ, ಶ್ರೀಮತಿ ರೂಪ, ಡಾ.ಲಾವಣ್ಯ, ಡಾ.ಮನೋನ್ಮಣಿ, ಶ್ರೀಮತಿ ಅಂಬಿಕಾ ಮತ್ತು ಎಂ.ಎಸ್.ಪಾಟೀಲ್ ಅವರು ಗೊಂದಲವಿಲ್ಲದೆ ವೇದಿಕೆಗೆ ಬೇಕಾದ ವಸ್ತುಗಳನ್ನು ಅಚ್ಚುಕಟ್ಟಾಗಿ ನೀಡುವ ವ್ಯವಸ್ಥೆ ಮಾಡಿದ್ದರು.

ಇಂತಹ ಸುಂದರ ಮತ್ತು ವ್ಯವಸ್ಥಿತ ಸಮಾರಂಭವನ್ನು ಆಯೋಜನೆ ಮಾಡಿದ್ದ ಡಾ.ಎಂ.ಆರ್.ಹುಲಿನಾಯ್ಕರ್ ಅಮೃತ ಮಹೋತ್ಸವ ಸಮಿತಿ ಪದಾಧಿಕಾರಿಗಳು ಮತ್ತು ಸದಸ್ಯರಿಗೆ ಧನ್ಯವಾದಗಳನ್ನು ಹೇಳಲು ಡಿಸೆಂಬರ್ 2ರಂದು ಪುಟ್ಟ ಸಮಾರಂಭವನ್ನು ವ್ಯವಸ್ಥೆ ಮಾಡಲಾಗಿತ್ತು. ಸಮಾರಂಭದ ಯಶಸ್ಸಿಗೆ ಶ್ರಮಿಸಿದ ಎಲ್ಲರೂ ಈ ಸಭೆಗೆ ಆಗಮಿಸಿದ್ದರು. ಅವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು.



ಪ್ರಾರಂಭದಲ್ಲಿ ಮಾತನಾಡಿದ ಸಮಿತಿಯ ಗೌರವಾಧ್ಯಕ್ಷರಾಗಿದ್ದ ಟಿ.ಆರ್.ಆಂಜನಪ್ಪ ಅವರು "ಯಾವುದೇ ಸಾರ್ವಜನಿಕ ಸಮಾರಂಭಗಳು ಪೂರ್ಣರೀತಿಯಲ್ಲಿ ಯಶಸ್ವಿಯಾಗಬೇಕಾದರೆ ಅಲ್ಲಿ ಪ್ಲಾನಿಂಗ್ ಮುಖ್ಯವಾದದ್ದು. ಆಹ್ವಾನ ಪತ್ರಿಕೆ ಹಂಚುವುದು ತುಂಬ ಕಷ್ಟ. ಇಂತಹ ಸಂದರ್ಭದಲ್ಲಿ ಆಪ್ತರ ಹೆಸರುಗಳನ್ನೇ ಮರೆತು ಬಿಟ್ಟಿರುತ್ತೇವೆ. ಆದರೆ ಇಲ್ಲಿ ವ್ಯವಸ್ಥಿತವಾಗಿ ಆಹ್ವಾನ ಪತ್ರಿಕೆ ಹಂಚಲಾಗಿದೆ. ನಮ್ಮ ಮನೆಗೆ ಡಾ.ರಮಣ ಮತ್ತು ಡಾ.ಲಾವಣ್ಯ ಬಂದು ಆಹ್ವಾನ ಪತ್ರಿಕೆ ಕೊಟ್ಟಿದ್ದರು. ಅದೇ ರೀತಿ ಟೀಂ ಮಾಡಿಕೊಂಡು ಎಲ್ಲ ತಾಲ್ಲೂಕಿಗೂ ಹೋಗಿ ಆಹ್ವಾನ ಪತ್ರಿಕೆ ಮುಟ್ಟಿಸಿರುವುದು ನನಗೆ ತೃಪ್ತಿ ತಂದಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳು ಈ ಕಾರ್ಯದಲ್ಲಿ ಗರಿಷ್ಠ ಮಟ್ಟದಲ್ಲಿ ಕೆಲಸ ಮಾಡಿದ್ದಾರೆ. ಜಿಲ್ಲೆಯ ಬಹುತೇಕರಿಗೆ ಈ ಕಾರ್ಯಕ್ರಮದ ಬಗ್ಗೆ ಮಾಹಿತಿ ದೊರಕಿದೆ. ಈ ಸಮಾರಂಭದ ಮೂಲಕ ಯಾರಲ್ಲಿ ಜಾಗೃತಿ ಮೂಡಬೇಕಾಗಿತ್ತೋ ಅದು ಮೂಡಿದೆ" ಎಂದರು.

> **"ಈ ಸಮಾರಂಭ ಕೇವಲ ಡಾ.ಹುಲಿನಾಯ್ಕರ್ ಅವರ ಸಮಾರಂಭವಾಗದೆ ಶೋಷಿತರ ಸಮಾರಂಭವಾಗಿ ಪ್ರತಿಧ್ವನಿಸಿರುವುದು ಸ್ವಾಗತಾರ್ಹ ವಿಚಾರ. ಸಮಿತಿಯ ವತಿಯಿಂದ ನಾವೆಲ್ಲಾ ತಾಲ್ಲೂಕು, ಹೋಬಳಿ ಮತ್ತು ಪ್ರಮುಖ ಗ್ರಾಮಗಳಿಗೆ ಹೋದಾಗ ಅಲ್ಲಿ ನಮಗೆ ದೊರೆತ ಜನರ ಪ್ರತಿಕ್ರಿಯೆ ಸಂತೋಷ ತಂದುಕೊಟ್ಟಿದೆ.**
>
> **– ಟಿ.ಎನ್.ಮಧುಕರ್**



ಶ್ರೀದೇವಿ ವೈದ್ಯಕೀಯ ಕಾಲೇಜಿನ ನಿರ್ದೇಶಕರಾದ ಡಾ.ರಮಣ ಹುಲಿನಾಯ್ಕರ್ ಅವರು ಮಾತನಾಡಿ"ಇಂತಹ ಸಮಾರಂಭವನ್ನು ವ್ಯವಸ್ಥೆ ಮಾಡುವುದರ ಮೂಲಕ ಶ್ರೀದೇವಿ ಕುಟುಂಬ ತನ್ನ ಸಂಘಟನಾ ಸಾಮರ್ಥ್ಯವನ್ನು ಸಮರ್ಥವಾಗಿ ನಿರೂಪಿಸಿದೆ. ಸಂಸ್ಥೆಯ ಎಲ್ಲಾ ಸಿಬ್ಬಂದಿಗಳ ಸಮರ್ಪಣಾ ಮನೋಭಾವದ ದುಡಿಮೆ ಇದರ ಯಶಸ್ಸಿಗೆ ಕಾರಣ" ಎಂದರು.

ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಅವರು "ಇಂತಹ ಸಮಾರಂಭಗಳು ಜರುಗಿದಾಗ ಸಂಸ್ಥೆಯ ಸಂಘಟನೆ ಮತ್ತು ದುಡಿಮೆಯ ಮಹತ್ವ ಗೊತ್ತಾಗುತ್ತದೆ. ಸಂಸ್ಥೆಯ ಎಲ್ಲಾ ಸಿಬ್ಬಂದಿಗಳು ಈ ಕೆಲಸ ತಮ್ಮದು ಎನ್ನುವ ಮನಸ್ಸಿನಿಂದಲೇ ಕೆಲಸ ಮಾಡಿದ್ದಾರೆ. ಇದು ಅವರಿಗೆ ಸಂಸ್ಥೆಯ ಸ್ಥಾಪಕರ ಮೇಲಿರುವ ಪ್ರೀತಿ ಮತ್ತು ಗೌರವವನ್ನು ಸೂಚಿಸುತ್ತದೆ" ಎಂದರು.

ಅಮೃತ ಮಹೋತ್ಸವ ಸಮಿತಿಯ ಅಧ್ಯಕ್ಷರಾದ ಎಸ್.ನಾಗಣ್ಣ ಅವರು ಮಾತನಾಡಿ "ಈ ಸಮಾರಂಭದ ಯಶಸ್ಸು ಸಮೂಹದ ಒಟ್ಟಾರೆ ಪ್ರಯತ್ನಕ್ಕೆ ದೊರೆತ ಕಾಣಿಕೆಯಾಗಿದೆ. ನಾನು ನಾಲ್ಕು ದಶಕಗಳಿಂದ ಡಾ.ಎಂ.ಆರ್. ಹುಲಿನಾಯ್ಕರ್ ಅವರನ್ನು ನೋಡುತ್ತಾ ಬಂದಿದ್ದೇನೆ. ಅವರು ಜನಾನುರಾಗಿಗಳು. ಅವರ ಹತ್ತಿರ ಬಂದ ಪೇಶೆಂಟ್ ಎಂದೂ ನಿರಾಶನಾಗಿ ಹೋಗುತ್ತಿರಲಿಲ್ಲ. ಅವರು ಹೆಚ್ಚು ಮಾತನಾಡಿದವರಲ್ಲ, ಕೆಲಸ ಮಾಡಿ ತೋರಿಸಿದವರು. ಈ ಜಿಲ್ಲೆಯ ಜನತೆಯ ಮನದಲ್ಲಿ ಅವರು ಹೇಗೆ ಪ್ರತಿಷ್ಠಾಪನೆಯಾಗಿದ್ದಾರೆ ಎಂಬುದಕ್ಕೆ ಈ ಸಮಾರಂಭ ಯಶಸ್ವಿಯಾಗಿರುವುದೇ ಸಾಕ್ಷಿಯಾಗಿದೆ. ಇಂತಹ ಸಮಾರಂಭಕ್ಕೆ ಮೂಲ ಬೀಜ 'ಅಂತರಂಗದ ಅವಲೋಕನ' ಕೃತಿ. ಎಲ್ಲರೂ ಓದಬೇಕಾದ ಕೃತಿ. ಕಾದಂಬರಿಗಿರುವ ಓಟ ಈ ಕೃತಿಗೆ ದೊರಕಿದೆ. ಅಲ್ಲಿರುವ ವಸ್ತುವೈವಿಧ್ಯವು ಅಚ್ಚರಿ ಮೂಡಿಸುತ್ತದೆ. ಇಂತಹ ಅಮೂಲ್ಯ ಕೃತಿರತ್ನವನ್ನು ಕನ್ನಡಸಾಹಿತ್ಯಕ್ಕೆ ಕೊಟ್ಟ ಡಾ.ಎಂ.ಆರ್. ಹುಲಿನಾಯ್ಕರ್ ಮತ್ತು ಕೃತಿಯ ನಿರೂಪಕರಾದ ಡಾ.ಕೆ.ಆರ್. ಕಮಲೇಶ್ ಅವರನ್ನು ಅಭಿನಂದಿಸುತ್ತೇನೆ." ಎಂದರು.

ಸಮಿತಿಯ ಪ್ರಧಾನ ಸಂಚಾಲಕರಾದ ಟಿ.ಎನ್.ಮಧುಕರ ಅವರು ಮಾತನಾಡುತ್ತಾ "ಈ ಸಮಾರಂಭ ಕೇವಲ ಡಾ.ಹುಲಿನಾಯ್ಕರ್ ಅವರ ಸಮಾರಂಭವಾಗದೆ ಶೋಷಿತರ ಸಮಾರಂಭವಾಗಿ ಪ್ರತಿಧ್ವನಿಸಿರುವುದು ಸ್ವಾಗತಾರ್ಹ ವಿಚಾರ. ಸಮಿತಿಯ ವತಿಯಿಂದ ನಾವೆಲ್ಲಾ ತಾಲ್ಲೂಕು, ಹೋಬಳಿ ಮತ್ತು ಪ್ರಮುಖ ಗ್ರಾಮಗಳಿಗೆ ಹೋದಾಗ ಅಲ್ಲಿ ನಮಗೆ ದೊರೆತ ಜನರ ಪ್ರತಿಕ್ರಿಯೆ ಸಂತೋಷ ತಂದುಕೊಟ್ಟಿದೆ. ಬಹುಮಟ್ಟಿನ ಜನರು ಸ್ವಯಂ ಪ್ರೇರಣೆಯಿಂದ ತಾವು ಗಾಡಿ ಮಾಡಿಕೊಂಡು ಬರುವುದಾಗಿ ಹೇಳಿದ್ದರು. ಅದರಂತೆ ಜನ ಪ್ರೀತಿಯಿಂದ ಇಲ್ಲಿಗೆ ಬಂದಿದ್ದಾರೆ. ಹೀಗೆ ಬಂದವರಲ್ಲಿ ಎಲ್ಲಾ ಸಮುದಾಯದವರನ್ನು ಕಾಣಬಹುದು. ಅದರಲ್ಲೂ ಶೋಷಿತರು ಮತ್ತು ಬಡವರ ಸಂಖ್ಯೆ ಯಥೇಚ್ಛವಾಗಿರುವುದು ಡಾ.ಹುಲಿನಾಯ್ಕರ್ ಅವರ ವ್ಯಕ್ತಿತ್ವವನ್ನು ತಿಳಿಯಲು ಸಹಾಯವಾಗುತ್ತದೆ. ಈ ಜನರ ಆಶಯವನ್ನು ಕಂಡ ಮೇಲೆ ಅದಕ್ಕನುಗುಣವಾಗಿ ಮುಂದೆ ನಾವು ಕೆಲಸ ಮಾಡಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ" ಎಂದರು.

ಭಾರತೀಯ ವೈದ್ಯಕೀಯ ಪರಿಷತ್ತಿನ ತುಮಕೂರು ಘಟಕದ ಪದಾಧಿಕಾರಿಗಳಾದ ಡಾ.ಟಿ.ಎಸ್.ಶಶಿಧರ ಅವರು ಮಾತನಾಡಿ "ಡಾ. ಹುಲಿನಾಯ್ಕರ್ ಅವರು ಮೂಲತಃ ವೈದ್ಯರಾದರೂ ಮಾನವೀಯ ಗುಣಗಳಿಂದಾಗಿ ಎಲ್ಲರಿಗೂ ಬೇಕಾದವರಾಗಿದ್ದಾರೆ. ಅವರು ನಮ್ಮ ವೈದ್ಯರ ಕುಲಕ್ಕೆ ಹೆಮ್ಮೆ ತಂದಿದ್ದಾರೆ. ವೈದ್ಯವೃತ್ತಿಯ ಜೊತೆಗೆ ಸಮುದಾಯದ ಹಿತಚಿಂತಕರಾಗಿ ಸಮಾಜಕ್ಕೆ ಆದರ್ಶಪ್ರಾಯರೆನಿಸಿದ್ದಾರೆ. ಶ್ರೇಷ್ಠ ವೈದ್ಯರು ಮತ್ತು ಉತ್ತಮ ಮಾನವೀಯ ಗುಣವುಳ್ಳವರು ಎಂದು ಡಾ.ಹುಲಿನಾಯ್ಕರ್ ಪ್ರಸಿದ್ಧರಾಗಿದ್ದಾರೆ " ಎಂದರು.

ತುಮಕೂರು ವಿಶ್ವವಿದ್ಯಾನಿಲಯ ಎಂ.ಎಸ್. ಡಬ್ಲ್ಯೂ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ.ಪರಶುರಾಮ್ ಅವರು ಮಾತನಾಡುತ್ತಾ "ಡಾ.ಎಂ.ಆರ್.ಹುಲಿನಾಯ್ಕರ್ ಅವರ ಸನ್ಮಾನ ಮತ್ತು ಕೃತಿ ಲೋಕಾರ್ಪಣಾ ಸಮಾರಂಭವು ಶ್ರೀದೇವಿ ಶಿಕ್ಷಣ ಸಂಸ್ಥೆಯ ಬೆಳವಣಿಗೆಗೆ ಸಹಾಯ ಮಾಡುತ್ತದೆ. ಈಗ ಸಂಸ್ಥೆಯ ಖ್ಯಾತಿ ಎಲ್ಲರನ್ನೂ ತಲುಪಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆ ಖಾಸಗಿ ವಿಶ್ವವಿದ್ಯಾನಿಲಯವಾಗಿ ಪರಿವರ್ತನೆಗೊಳ್ಳಲು ಇದು ಸಕಾಲ. ಈ ದಿಸೆಯಲ್ಲಿ ಎಲ್ಲರೂ ಕಾರ್ಯಪ್ರವರ್ತಕರಾಗಬೇಕು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ಕೆಲಸವನ್ನಾದರೂ ಸ್ವಯಂ ಪ್ರೇರಣೆಯಿಂದ ನಾನು ಮಾಡಿಕೊಡಲು ಸಿದ್ಧನಿದ್ದೇನೆ" ಎಂದರು.

ಅಂತರಂಗದ ಅವಲೋಕನ ಕೃತಿಯ ನಿರೂಪಕರಾದ ಡಾ.ಕೆ.ಆರ್.ಕಮಲೇಶ್ ಅವರು ಮಾತನಾಡಿ "ಜನವರಿ 16 ಡಾ.ಎಂ.ಆರ್. ಹುಲಿನಾಯ್ಕರ್ ಅವರ ಜನ್ಮದಿನ. ಅದನ್ನು 'ಪ್ರೇರಣಾ ದಿನ' ಎಂಬುದಾಗಿ ಆಚರಿಸಬೇಕು. ಡಾ.ಹುಲಿನಾಯ್ಕರ್ ಅವರ ಆತ್ಮಕಥನವನ್ನು ಒಮ್ಮೆ ಓದಿದರೆ ಎಲ್ಲರೂ ಪ್ರೇರಣೆ ಪಡೆಯುತ್ತಾರೆ. ಗ್ರಂಥ ಓದಿದ ಪ್ರತಿಯೊಬ್ಬರಲ್ಲೂ ಆತ್ಮವಿಶ್ವಾಸ ವೃದ್ಧಿಸುತ್ತದೆ. ಈ ಗ್ರಂಥದಲ್ಲಿ ಎಲ್ಲ ಸಮುದಾಯದವರನ್ನೂ ಕಾಣಬಹುದು. ಆತ್ಮಕಥನ ಬರೆಯವುದು ಕಷ್ಟದ ಕೆಲಸ. ಅಲ್ಲಿ ಪ್ರಾಮಾಣಿಕತೆ ಮತ್ತು ಜನಪರವಾದ ಕಾಳಜಿ ಮುಖ್ಯವಾಗುತ್ತದೆ. ಈ ಎರಡು ಸಂಗತಿಗಳನ್ನು ಈ ಗ್ರಂಥದಲ್ಲಿ ಕಾಣಬಹುದು. ಯುವಜನಾಂಗಕ್ಕೆ ಪ್ರೇರಣೆ ನೀಡುವ ಅಮೂಲ್ಯ ಕೃತಿ" ಎಂದರು.

ಅಭೂತಪೂರ್ವ ಕಾರ್ಯಕ್ರಮದ ಕೇಂದ್ರಬಿಂದು ಡಾ.ಎಂ.ಆರ್.ಹುಲಿನಾಯ್ಕರ್ ಅವರು ಕೊನೆಯಲ್ಲಿ ಮಾತನಾಡಿ "ನಾನು ಯಾರಿಗಾದರೂ ಸ್ಫೂರ್ತಿಯಾಗುತ್ತೇನೆ ಎಂದು ಭಾವಿಸಿರಲಿಲ್ಲ. ಜೀವನದಲ್ಲಿ ಬಂದ ಘಟನೆಗಳನ್ನು ಸಮಾಧಾನದಿಂದ ಅನುಭವಿಸಿದ್ದೇನೆ. ವ್ಯಕ್ತಿ ಕೆಲಸ ಮಾಡುತ್ತಾ ತನ್ನ ಸಾಧನೆಯ ಮೇಲೆ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಭಾವಿಸಿದವನು ನಾನು. ಕೆಲಸ ಮಾಡುತ್ತಾ ಹೋದಂತೆ ಅನೇಕ ಸಮಾನ ಮನಸ್ಸುಗಳು ನನ್ನ ಜೊತೆ ಕೈ ಜೋಡಿಸಿದವು. ಅವರ ನಿಸ್ವಾರ್ಥ ಸೇವೆ ನನಗೆ ಕೀರ್ತಿ ತಂದುಕೊಟ್ಟಿದೆ. ಗ್ರಂಥದಲ್ಲಿ ನನಗೆ ಮತ್ತು ಸಂಸ್ಥೆಗೆ ಸಹಾಯ ಮಾಡಿದ ಪ್ರತಿಯೊಬ್ಬರನ್ನೂ ಸ್ಮರಿಸಿಕೊಂಡಿದ್ದೇನೆ. ಆ ಮಹನೀಯರಿಗೆ ಈಗಲೂ ಧನ್ಯವಾದಗಳನ್ನು ಹೇಳುತ್ತೇನೆ" ಎಂದರು

ಸಮಾರಂಭಕ್ಕೆ ಶ್ರಮಿಸಿದ ಎಲ್ಲರಿಗೂ ಶಾಲು ಹೊದಿಸಿ ಸನ್ಮಾನ ಮಾಡಲಾಯಿತು. ಸಮಾರಂಭದ ನಿರೂಪಣೆಯನ್ನು ಎಂ.ಬಿ.ಎ. ಇಲಾಖೆಯ ಮುಖ್ಯಸ್ಥರಾದ ಡಾ.ಕೆ.ಎಸ್. ರಾಮಕೃಷ್ಣ ಅವರು ನಡೆಸಿಕೊಟ್ಟರು. ಶ್ರೀದೇವಿ ಶಿಕ್ಷಣ ಸಂಸ್ಥೆಯ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಸಮಾರಂಭದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

■ ವರದಿ: ಎನ್.ಭಾರತಿ

# ಲೋಕಸಭಾ ಚುನಾವಣೆಯ ದಿಕ್ಸೂಚಿ

◀◀ ...ಮೊದಲನೇ ಪುಟದಿಂದ





ಪ್ರಧಾನಿ ನರೇಂದ್ರ ಮೋದಿ ಅವರು ಹೇಳುವಂತೆ ಈ ಚುನಾವಣೆಯಲ್ಲಿ ನಾಲ್ಕು ಶಕ್ತಿಗಳು ಬಿಜೆಪಿ ಪಕ್ಷವನ್ನು ಬೆಂಬಲಿಸಿವೆ. ಅವುಗಳೆಂದರೆ ನಾರಿಶಕ್ತಿ, ಯುವಶಕ್ತಿ, ರೈತಶಕ್ತಿ ಮತ್ತು ಬಡವರ ಶಕ್ತಿ. ಚುನಾವಣೆ ನಡೆದ 638 ಸ್ಥಾನಗಳ ಪೈಕಿ ಬಿಜೆಪಿ 340 ಸ್ಥಾನಗಳನ್ನು ಪಡೆದಿರುವುದನ್ನು ನೋಡಿದರೆ ಬಿಜೆಪಿ ಎಲ್ಲ ವರ್ಗದವರ ಬೆಂಬಲ ಗಳಿಸಿದೆ ಎಂದು ಸುಲಭವಾಗಿ ತಿಳಿಯಬಹುದು. ಇದು ಸಾಮಾನ್ಯ ಸಾಧನೆಯಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದ ಸಾಧನೆ ಯಾವ ರೀತಿ ಇರುತ್ತದೆ ಎಂಬುದಕ್ಕೆ ಈ ಫಲಿತಾಂಶ ದಿಕ್ಸೂಚಿಯಾಗಿದೆ.

ನಿರೀಕ್ಷೆಯಂತೆ ಕಾಂಗ್ರೆಸ್ ಪಕ್ಷ ತೆಲಂಗಾಣದಲ್ಲಿ ಸ್ವತಂತ್ರವಾಗಿ ಅಧಿಕಾರಕ್ಕೆ ಬಂದಿದೆ. ಅಲ್ಲಿ ಅಧಿಕಾರದಲ್ಲಿದ್ದ ಬಿ.ಆರ್.ಎಸ್. ಪಕ್ಷ ತನ್ನೆಲ್ಲಾ ಶಕ್ತಿಯನ್ನು ಕಳೆದುಕೊಂಡು ನಿಸ್ತೇಜವಾಗಿತ್ತು. ಅಲ್ಲಿ ಬಿಜೆಪಿ ಇನ್ನೂ ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳದ ಕಾರಣ ಕಾಂಗ್ರೆಸ್‌ಗೆ ವಿಧಾನಸಭಾ ಚುನಾವಣೆಯ ಹೋರಾಟ ಅಷ್ಟರಮಟ್ಟಿಗೆ ಹಗುರವಾಯಿತು.

ಕಾಂಗ್ರೆಸ್‌ಪಕ್ಷ ತನ್ನ ಗ್ಯಾರಂಟಿಗಳಿಂದಲೇ ತಾನು ಜಯಗಳಿಸುತ್ತೇನೆ ಎಂಬ ನಂಬಿಕೆಯಲ್ಲಿತ್ತು. ಚುನಾವಣೆಯಲ್ಲಿ ಗ್ಯಾರಂಟಿಗಳು ಸ್ವಲ್ಪಮಟ್ಟಿಗೆ ಸಹಾಯ ಮಾಡುತ್ತವೆ, ನಿಜ. ಆದರೆ ಅವುಗಳಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ. ಪಕ್ಷ ಸ್ಥಳೀಯ ಮಟ್ಟದಲ್ಲಿ ಭದ್ರವಾಗಿರಬೇಕು. ಅಲ್ಲಿನ ನಾಯಕರಿಗೆ ಜನರ ಮುಂದೆ ನಿಲ್ಲುವ ನೈತಿಕಶಕ್ತಿಯಿರಬೇಕು. ಹೋರಾಟದ ಹಿನ್ನೆಲೆಯಿರಬೇಕು. ಕಾಂಗ್ರೆಸ್‌ಗೆ ತನ್ನದೇ ಆದ ಸಿದ್ಧಾಂತವಿಲ್ಲದ ಪರಿಸ್ಥಿತಿ ಬಂದಂತಿದೆ. ಅನೇಕ ವಿಷಯಗಳಲ್ಲಿ ಈ ಪಕ್ಷ ಬಿಜೆಪಿಯನ್ನು ಅನುಕರಿಸುತ್ತದೆ. ಸ್ಥಳೀಯ ಪಕ್ಷಗಳ ಮರ್ಜಿಯನ್ನು ಅನುಸರಿಸಿ ಮಾತನಾಡುತ್ತದೆ. ಇಂಗ್ಲೆಂಡ್‌ನ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎರಡು ಪಕ್ಷಗಳ ವ್ಯವಸ್ಥೆಯಿದ್ದರೂ ಸೈದ್ಧಾಂತಿಕವಾಗಿ ಎರಡು ವಿಭಿನ್ನ ವಿಚಾರಧಾರೆಗಳನ್ನು ಅವು ಹೊಂದಿವೆ. ತನ್ನ ವಿಚಾರಗಳಿಂದ ಮತದಾರರನ್ನು ಸೆಳೆಯುವ ರಾಜಕೀಯ ಪಕ್ಷ ಮಾತ್ರ ದೀರ್ಘಕಾಲ ಜನರ ಮೇಲೆ ಪ್ರಭಾವ ಬೀರಬಲ್ಲದು. ಬಿಜೆಪಿ ಅದನ್ನು ಮಾಡಿ ತೋರಿಸಿದೆ. ಕಾಂಗ್ರೆಸ್‌ನ ಅನೇಕ ನಾಯಕರಿಗೆ ತಮ್ಮ ಪಕ್ಷ ಏಕೆ ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ ಎನ್ನುವ ವಿಚಾರವೇ ತಿಳಿಯುತ್ತಿಲ್ಲ.

ಕಾಂಗ್ರೆಸ್ ಪಕ್ಷದ ವಿಫಲತೆಗೆ ಹೆಚ್ಚಿನ ಕೊಡುಗೆಯನ್ನು ಕಾಂಗ್ರೆಸ್ ಹೈಕಮಾಂಡ್ ನೀಡಿದೆ. 1952ರಿಂದಲೂ ಕಾಂಗ್ರೆಸ್‌ನ ಹೈಕಮಾಂಡ್ ರಾಜ್ಯಗಳ ನಾಯಕರ ಮೇಲೆ ತಾನು ಹೊಂದಿದ್ದ ಹಿಡಿತವನ್ನು ಬಿಟ್ಟುಕೊಡಲು ಸಮ್ಮತಿಸದೆ ರಾಜ್ಯಗಳಲ್ಲಿ ಭಿನ್ನಮತವನ್ನು ಪೋಷಿಸಿಕೊಂಡು ಬರುತ್ತಿದೆ.

ಕರ್ನಾಟಕ ರಾಜ್ಯವನ್ನು ಅದಕ್ಕೆ ಉದಾಹರಣೆಯಾಗಿ ನೋಡಬಹುದು. ಸ್ವತಃ ದೇವರಾಜ ಅರಸು ಸೇರಿದಂತೆ ಅನೇಕ ಹಿಂದುಳಿದ ನಾಯಕರು ಅಧಿಕಾರದಲ್ಲಿದ್ದಾಗ ನಿದ್ದೆಯಿಲ್ಲದೆ ಕಳೆದ ದಿನಗಳು ಸಾಕ್ಷಿವೆ. ಕಾಂಗ್ರೆಸ್ ಹೈಕಮಾಂಡ್ ಅಧಿಕಾರದಲ್ಲಿದ್ದ ನಾಯಕರಿಗೆ ಬೆಂಬಲ ವ್ಯಕ್ತಪಡಿಸುವ ಬದಲು ಬಂಡಾಯದವರಿಗೆ ಬೆಂಬಲ ಕೊಟ್ಟಿದೆ. ರಾಜಸ್ತಾನವೇ ಇದಕ್ಕೆ ಉದಾಹರಣೆ.

ಕಾಂಗ್ರೆಸ್ ಸ್ವಾತಂತ್ರ್ಯಪೂರ್ವದಿಂದಲೂ ತನಗೆ ಬೆಂಬಲಿಗರು ಯಾರಿದ್ದರು ಎಂಬುದನ್ನು ಮರೆತಿದೆ. ಹೈಕಮಾಂಡನ್ನು ಅತಿಯಾಗಿ ಅವಲಂಬಿಸುವ ಎಲ್ಲಾ ರಾಜಕೀಯ ಪಕ್ಷಗಳಿಗೂ ಇಂದಿನ ಕಾಂಗ್ರೆಸ್ ಸ್ಥಿತಿಯೇ ಬರಬಹುದು. ಕಾಂಗ್ರೆಸ್ ಪಕ್ಷಕ್ಕೆ ಪುನಶ್ಚೇತನ ನೀಡುವುದು ಅಷ್ಟು ಸುಲಭವಲ್ಲ. ಜನಮಾನಸದಿಂದ ಮೂಡುವ ನಾಯಕರು ಮಾತ್ರ ಇಂತಹ ಕೆಲಸ ಮಾಡಬಲ್ಲರು.

**ಕೃತಜ್ಞತೆಯಿಂದ ಮನ ಬಾಗಿದೆ**

ಸಂಕೋಚದಿಂದ ಆದರೂ ಹೇಳಲೇಬೇಕಾದ ಸಂಗತಿಯೊಂದನ್ನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ನವೆಂಬರ್ 25ರಂದು ನನಗೆ 75 ವರ್ಷ ಪೂರ್ಣಗೊಂಡ ಸಂದರ್ಭವನ್ನು ನೆಪಮಾಡಿಕೊಂಡು ನನ್ನ ಆತ್ಮಕಥನ 'ಅಂತರಂಗದ ಅವಲೋಕನ' ಕೃತಿಯನ್ನು ಲೋಕಾರ್ಪಣೆ ಮಾಡಿ, ನನಗೂ ಮತ್ತು ನನ್ನ ಮಡದಿ ಶಾಂತಾದುರ್ಗಾದೇವಿ ಅವರಿಗೂ, ಡಾ.ಎಂ.ಆರ್.ಹುಲಿನಾಯ್ಕರ್ ಅಮೃತಮಹೋತ್ಸವ ಸಮಿತಿಯವರು ನಾಗರಿಕ ಸನ್ಮಾನವನ್ನು ಮಾಡಿದರು.

ಶ್ರೀಕ್ಷೇತ್ರ ಕಾಗಿನೆಲೆಯ ಕನಕಗುರುಪೀಠದ ಜಗದ್ಗುರು ಪೂಜ್ಯ ಶ್ರೀ ಶ್ರೀ ನಿರಂಜನಾನಂದ ಪುರಿ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಹಿರಿಯರಾದ ಪೂಜ್ಯ ಬಿ.ಎಸ್. ಯಡಿಯೂರಪ್ಪ ಅವರು ಪ್ರೀತಿಯಿಂದ ಸಮಾರಂಭದ ಉದ್ಘಾಟನೆ ಮಾಡಿದರು. ಕರ್ನಾಟಕ ಸರ್ಕಾರದ ಗೃಹಸಚಿವರಾದ ಡಾ. ಜಿ.ಪರಮೇಶ್ವರ ಅವರು ಅಂತರಂಗದ ಅವಲೋಕನ ಕೃತಿಯ ಲೋಕಾರ್ಪಣೆ ಮಾಡಿದರು. ಮತ್ತೊಬ್ಬ ಸಚಿವರಾದ ಕೆ.ಎನ್. ರಾಜಣ್ಣ ಅವರು ಅಭಿನಂದನೆಯ ನುಡಿಗಳನ್ನು ನುಡಿದಿದ್ದಾರೆ. ತುಮಕೂರಿನ ಶಾಸಕರಾದ ಜ್ಯೋತಿ ಗಣೇಶ್ ಅವರು ಮೊದಲ ಪ್ರತಿ ಸ್ವೀಕಾರ ಮಾಡಿದರು. ಖ್ಯಾತ ವಿದ್ವಾಂಸರಾದ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ಅವರು ಕೃತಿ ಪರಿಚಯ ಮಾಡಿಕೊಟ್ಟರು. ಕಳೆದ ಒಂದು ವರ್ಷದಿಂದ ನಿಮ್ಮ ಕೈಸೇರುತ್ತಿರುವ 'ಶ್ರೀದೇವಿ ಅಂತರಂಗ' ಮಾಸ ಪತ್ರಿಕೆಯ ಎರಡನೆಯ ವರ್ಷದ ವಿಶೇಷ ಸಂಚಿಕೆಯನ್ನು ವಿಜಯವಾಣಿ ಪತ್ರಿಕೆ ಸಹಾಯಕ ಸಂಪಾದಕರಾದ ರುದ್ರಣ್ಣ ಹರ್ತಿಕೋಟೆ ಅವರು ಬಿಡುಗಡೆ ಮಾಡಿದರು. ಎಲ್ಲಾ ಮಹನೀಯರೂ ನನ್ನ ಮೇಲೆ ಅಭಿಮಾನದ ಮಳೆ ಸುರಿಸಿದ್ದಾರೆ. ಅವರಿಗೆ ಹೃದಯಪೂರ್ವಕವಾದ ಧನ್ಯವಾದಗಳು.

ಎಪ್ಪತ್ತಾರು ವರ್ಷದ ಬದುಕಿನಲ್ಲಿ ನಾನು ಒಂದಿಷ್ಟು ಕೆಲಸ ಮಾಡಿರಬಹುದು. ಅದಕ್ಕೆ ಅನೇಕರ ಆಶೀರ್ವಾದ ಕಾರಣವಾಗಿರುತ್ತದೆ. ನನ್ನ ಆತ್ಮಕಥನದ ಲೋಕಾರ್ಪಣಾ ಕಾರ್ಯಕ್ರಮಕ್ಕೆ ಹತ್ತು ಸಾವಿರ ಜನ ಸಾಕ್ಷೀಭೂತರಾಗಿರುವುದು ನನ್ನ ಸುಕೃತ. ಅವರ ಪ್ರೀತಿ, ವಿಶ್ವಾಸಗಳನ್ನು ಎಂದೂ ಮರೆಯಲು ಸಾಧ್ಯವಾಗುವುದಿಲ್ಲ.

ಇಂತಹ ಅದ್ಭುತ ಸಮಾರಂಭವನ್ನು ಸಂಘಟಿಸುವಲ್ಲಿ ಸಮಿತಿಯ ಅಧ್ಯಕ್ಷರಾದ ಎಸ್. ನಾಗಣ್ಣ, ಗೌರವಾಧ್ಯಕ್ಷರಾದ ಟಿ.ಆರ್. ಆಂಜನಪ್ಪ ಮತ್ತು ಪ್ರಧಾನ ಸಂಚಾಲಕರಾದ ಟಿ.ಎನ್. ಮಧುನಾಗಣ್ಣ ಅವರುಗಳ ಅಪಾರ ಶ್ರಮವಿರುವುದನ್ನು ಮರೆಯುವಂತಿಲ್ಲ. ಅವರನ್ನು ಇದಕ್ಕಾಗಿ ನಾನು ಅಭಿನಂದಿಸುತ್ತೇನೆ.

ಯಾವುದೇ ರಚನಾತ್ಮಕ ಕೆಲಸಗಳು ಕೇವಲ ವ್ಯಕ್ತಿಯೊಬ್ಬರಿಂದ ಅನುಷ್ಠಾನವಾಗುವುದಿಲ್ಲ. ಸಮೂಹದಿಂದ ಇಂತಹ ಮಹತ್ವದ ಕೆಲಸಗಳು ನಡೆಯುತ್ತವೆ. ಸಾಮಾನ್ಯವಾಗಿ ಕೆಲಸದ ನೇತೃತ್ವ ವಹಿಸಿದವರಿಗೆ ಶ್ರೇಯಸ್ಸು ದೊರೆಯುತ್ತದೆ. ನನಗೂ ಇಂತಹ ಶ್ರೇಯಸ್ಸು ದೊರಕಿದೆ. ಶ್ರೀದೇವಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆಯಿಂದ ಹಿಡಿದು ಈ ತನಕದ ಬೆಳವಣಿಗೆಯವರೆಗೆ ಅನೇಕರು ನನ್ನ ಬೆನ್ನು ಹಿಂದೆ ನಿಂತು ಮಾರ್ಗದರ್ಶನ ಹಾಗೂ ಬೆಂಬಲ ನೀಡಿದ್ದಾರೆ.

ಅವಿಭಾಜ್ಯ ಧಾರವಾಡ ಜಿಲ್ಲೆ ನವಲಗುಂದ ತಾಲ್ಲೂಕಿನ ತುಪ್ಪದಕುರಹಟ್ಟಿಯಲ್ಲಿ ಜನಿಸಿದ ನನಗೆ ತಂದೆ ರಂಗಪ್ಪ ಹುಲಿನಾಯ್ಕರ್ ಮತ್ತು ತಾಯಿ ಎಲ್ಲಮ್ಮ ಹುಲಿನಾಯ್ಕರ್ ಅವರ ಬದುಕೇ ಪ್ರೇರಣೆ ನೀಡಿದೆ. ಸದಾ ಕಾಲ ನನ್ನ ಹಿಂದಿರುವ ಅನೇಕ ದಿವ್ಯಚೇತನಗಳು ನನ್ನನ್ನು ಕಾಪಾಡುತ್ತಾ ಬಂದಿವೆ. ಅಧ್ಯಾಪಕರಾದ ಹಾಲವರ್, ಬಾಲ್ಯದಲ್ಲಿ ಜೀವನದ ಪಾಠ ಕಲಿಸಿದ ಮರಿಯಮ್ಮ ಕೆರೇಸೂರು, ತ್ಯಾಗದ ಮಹತ್ವವನ್ನು ಹೇಳಿದ ದೊಡ್ಡಮ್ಮ ಅಡವಿಯಮ್ಮ, ಅಧ್ಯಾತ್ಮ ಗುರುಗಳಾದ ಗಾಮನಗಟ್ಟಿ ಬಸವದೇವರು, ಹುರಕಡ್ಲಿ ಅಜ್ಜ, ಸಿದ್ಧಗಂಗೆಯ ಸಿದ್ಧಪುರುಷರೆಂದು ಖ್ಯಾತರಾದ ಡಾ.ಶಿವಕುಮಾರಸ್ವಾಮೀಜಿ, ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿ ನಿವೃತ್ತರಾಗಿರುವ ಹಿರಿಯರಾದ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಅವರುಗಳು ಮಾಡಿರುವ ಆಶೀರ್ವಾದ ನನಗೆ ಜೀವನಪಥದಲ್ಲಿ ಆತ್ಮವಿಶ್ವಾಸದಿಂದ ಸಾಗಲು ಮಾರ್ಗದರ್ಶನ ನೀಡಿದೆ.

ಮಡದಿ ಶಾಂತಾದುರ್ಗಾದೇವಿ ಹಾಗೂ ಅವರ ತಂದೆ ತಾಯಿಯರಾದ ಷಣ್ಮುಖಪ್ಪ ಹಾಗೂ ದಿವಂಗತ ಹನುಮಂತಮ್ಮ ಅವರುಗಳು ಕೊಟ್ಟ ಪ್ರೋತ್ಸಾಹವನ್ನು ಮರೆಯುವಂತಿಲ್ಲ. ಮಕ್ಕಳಾದ ಭವಾನಿ, ಮನೋನ್ಮಣಿ, ರಮಣ ಮತ್ತು ಅಂಬಿಕಾ, ಅಳಿಯಂದಿರಾದ ಸ್ಟಾಲಿನ್, ಪಾಟೀಲ್ ಮತ್ತು ಸೊಸೆ ಲಾವಣ್ಯ ಅವರುಗಳು ನನ್ನನ್ನು 'ಅಪ್ಪಾಜಿ' ಎನ್ನುತ್ತಾ ರಕ್ಷಾಕವಚದಂತಿದ್ದಾರೆ.



ನನ್ನ ಸಹೋದ್ಯೋಗಿಗಳು ಮತ್ತು ಶ್ರೀದೇವಿ ಆಸ್ಪತ್ರೆ ಮತ್ತು ಶಿಕ್ಷಣ ಸಂಸ್ಥೆಯ ಸಿಬ್ಬಂದಿಗಳ ನೆರವನ್ನು ಮರೆಯುವಂತಿಲ್ಲ. ಇವರುಗಳು ಸಂಘಟಿಸಿದ ಈ ಸಮಾರಂಭ ಅವರ ಸೃಜನಶೀಲಶಕ್ತಿ ಮತ್ತು ನನ್ನ ವಿಚಾರದಲ್ಲಿ ಅವರಿಗಿರುವ ಗೌರವಕ್ಕೆ ಉದಾಹರಣೆಯಂತಿದೆ. ಸಂಸ್ಥೆಯ ಬೆಳವಣಿಗೆಗೂ ಇಂತಹ ಭಾವನಾತ್ಮಕ ಸಮಾರಂಭಗಳ ಅಗತ್ಯವಿದೆ.

ಇಂತಹ ಸ್ಮರಣೀಯ ಸಮಾರಂಭಕ್ಕೆ ಮುಖ್ಯ ಕಾರಣ ಅಂತರಂಗದ ಅವಲೋಕನ ಕೃತಿ. ನನ್ನ ಜೀವನಾನುಭವವನ್ನು ನನ್ನಿಂದ ಹೇಳಿಸಿ, ಅದನ್ನು ದಾಖಲು ಮಾಡಿರುವ ಡಾ.ಕೆ.ಆರ್.ಕಮಲೇಶ್ ಮತ್ತು ಅವರಿಗೆ ಸಹಾಯ ಮಾಡಿರುವ ಶ್ರೀಮತಿ ಎನ್. ಭಾರತಿ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಕಮಲೇಶ್ ಅವರ ತಾಯಿ ದಿವಂಗತ ಎಸ್.ಎನ್. ಸರೋಜಮ್ಮ ಅವರು ಕಂಡಿದ್ದ ಕನಸು ಇಂದು ನನಸಾಗಿದೆ.

ಈ ಗ್ರಂಥಕ್ಕೆ ಪ್ರಾಚೀನ ಕಾವ್ಯಗಳಿಗೆ ಬರೆಯುವಂತೆ ಐವತ್ತು ಪುಟಗಳ ಮುನ್ನುಡಿ ಬರೆದಿರುವ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಕನ್ನಡ ಪ್ರಾಧ್ಯಾಪಕರಾಗಿರುವ ಡಾ.ಕೆ. ಅನಂತರಾಮು, ಗ್ರಂಥದ ಮೊದಲ ಓದುಗರಾಗಿ ಕೃತಿಯನ್ನು ಮೆಚ್ಚಿ ಹರಸಿರುವ ಎಚ್.ಸಿ.ನೀರಾವರಿ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, ಬಿ.ಸುಜ್ಞಾನಮೂರ್ತಿ, ಡಾ.ಆನಂದ ದೇಶಪಾಂಡೆ, ಡಾ.ಮಹದೇವಿ ಸೋಲಶಿ ಹಾಗೂ ಎನ್.ಭಾರತಿ ಅವರುಗಳನ್ನು ಮರೆಯುವಂತಿಲ್ಲ.

ಗ್ರಂಥ ಪ್ರಕಟಣೆಯ ವಿಚಾರ ನನಗೆ ಅಷ್ಟಾಗಿ ಗೊತ್ತಿರಲಿಲ್ಲ. ಎಷ್ಟೊಂದು ಜನರ ಕೈಗಳು ಇದರಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರೆ ಯಾರಿಗಾದರೂ ಆಶ್ಚರ್ಯವಾಗುವುದುಂಟು. ಮುಖಪುಟದ ಛಾಯಾಚಿತ್ರಗಳನ್ನು ತೆಗೆದುಕೊಟ್ಟ ಪ್ರೊ.ಎಂ.ಶ್ರೀಧರಮೂರ್ತಿ, ಮುಖಪುಟ ಮತ್ತು ವಿನ್ಯಾಸ ಮಾಡಿದ ಸುಮ ಕೆ, ಕರಡು ತಿದ್ದಿಕೊಟ್ಟ ಜೆ.ಎನ್. ಶಾಮರಾವ್, ಸುಜ್ಞಾನಮೂರ್ತಿ, ವೆಂಕಟೇಶ್ ಪ್ರಸಾದ್ ಬಿ.ಎಸ್. ಎಂ.ಎಚ್.ನೀಲಾ ಹಾಗೂ ಅಂದವಾಗಿ ಮುದ್ರಿಸಿದ ಹೆಚ್. ಪ್ರಕಾಶ್ ಹೀಗೆ ಜ್ಞಾಪಿಸಿಕೊಳ್ಳುತ್ತಾ ಹೋದರೆ ಪಟ್ಟಿ ಬೆಳೆಯುತ್ತಾ ಹೋಗಬಹುದು. ಅವರುಗಳ ಸಹಾಯ ಸದಾ ಸ್ಮರಣೆಗೆ ಅರ್ಹವಾಗಿದೆ.

ಅಂತರಂಗದ ಅವಲೋಕನ ಗ್ರಂಥ ಯಾರಿಗೆ ಸ್ಫೂರ್ತಿ ಕೊಡುತ್ತದೋ ನನಗೆ ಗೊತ್ತಿಲ್ಲ. ಅದಕ್ಕೆ ಕಾಲ ಉತ್ತರಿಸುತ್ತದೆ. ಇದರ ರಚನೆಯ ಕಾಲದಲ್ಲಿ ಅನೇಕ ಚೇತನಗಳ ನೆನಪಿನಿಂದ ನನ್ನ ಮನಸ್ಸು ಕೃತಜ್ಞತೆಯಿಂದ ತುಂಬಿ ಹೋಗಿದೆ. ಅನೇಕ ಸಂದರ್ಭಗಳಲ್ಲಿ ಮಾತನಾಡದಷ್ಟು ಭಾವುಕನಾಗಿದ್ದೇನೆ.

ಕನ್ನಡನಾಡಿನ ಹಿರಿಯ ವಿದ್ವಾಂಸರು ಮತ್ತು ವಚನಸಾಹಿತ್ಯ ಕುರಿತು ಅಧಿಕಾರವಾಣಿಯಿಂದ ಮಾತನಾಡಬಲ್ಲವರಾಗಿದ್ದ ಪೂಜ್ಯ ಎಂ.ಆರ್.ಶ್ರೀನಿವಾಸಮೂರ್ತಿ ಅವರ ಮಾತುಗಳನ್ನು ಹೇಳಿ ವಿರಮಿಸುತ್ತೇನೆ.

**"ಯಾರಾದರೂ ಒಳ್ಳೆಯ ಮಾತನಾಡಿದರೆ ಅವರು ನನಗೆ ಬಂಧುಗಳು ಒಂದು ಉಪಕಾರ ಮಾಡಿದರೆ ಅವರೇ ನನ್ನ ಮಕ್ಕಳು."**

■ ನಿರೂಪಣೆ – ಶ್ರೀವತ್ಸ

ಅರ್ಚನೆ

# ವೇದಮಾತೆ ಗಾಯತ್ರೀ!

**ಓಂ ಭೂರ್ಭುವಃ ಸ್ವಃ**
**ತತ್ಸವಿತುರ್ವರೇಣ್ಯಂ**
**ಭರ್ಗೋ ದೇವಸ್ಯ ಧೀಮಹಿ**
**ಧಿಯೋ ಯೋನಃ ಪ್ರಚೋದಯಾತ್ !!**

**ಅರ್ಥ:** ಭೂಮಿ, ಆಕಾಶ ಮತ್ತು ಅಂತರಿಕ್ಷವನ್ನಾವರಿಸಿದ ತೇಜೋಮಯನಾದ, ದಿವ್ಯಸ್ವರೂಪನಾದ, ಪೂಜಿಪನಾದ ಆ ಪರಬ್ರಹ್ಮನು ನಮ್ಮ ವಿವೇಕಗಳನ್ನು (ಜ್ಞಾನದ) ಬೆಳಕಿನೆಡೆಗೆ ಪ್ರೇರೇಪಿಸಲಿ.

24 ಅಕ್ಷರದ ತ್ರಿಪದಿಯಲ್ಲಿರುವ ಈ ಶ್ಲೋಕ ಮೊದಲ ಬಾರಿಗೆ ಋಗ್ವೇದದಲ್ಲಿ ಕಾಣಬರುತ್ತದೆ. ನಂತರ ಈ ಮಹಾಮಂತ್ರವನ್ನು ಜಗತ್ತಿಗೆ ಕೊಟ್ಟವರು ಬ್ರಹ್ಮರ್ಷಿ ವಿಶ್ವಾಮಿತ್ರ ಎಂಬುದು ಪುರಾಣಗಳಲ್ಲಿನ ಕತೆಯಾಗಿದೆ.



ಗಾಯತ್ರಿ ದೇವಿಯು (ಸಾವಿತ್ರಿ) ಬ್ರಹ್ಮನ ಪತ್ನಿಯಾದ ಸರಸ್ವತಿಯ ಸ್ವರೂಪ ಎಂಬ ಪ್ರತೀತಿ ಇದೆ. ವೇದಮಾತೆ ಎಂದು ಕರೆಯಲ್ಪಡುವ ಗಾಯತ್ರಿದೇವಿಯನ್ನು ಐದು ಮುಖ ಮತ್ತು ಹತ್ತು ಬಾಹುಗಳುಳ್ಳವಳು, ಕಮಲಾಸನಳು ಮತ್ತು ಹಂಸವಾಹಿನಿಯೆಂದು ವರ್ಣಿಸಲಾಗಿದೆ. ಸಾಮಾನ್ಯವಾಗಿ ಗಾಯತ್ರಿ ದೇವಿಯನ್ನು ಎಲ್ಲರೂ ಸ್ವೀಕರಿಸಿದ್ದಾರೆ.

ಕೆಂಪು, ಬಿಳುಪು, ಹಳದಿ, ನೀಲ ಬಣ್ಣಗಳ ಕಾಂತಿಯಿಂದ ಕೂಡಿರುವವಳೂ ಉಜ್ವಲವಾದ ಮೂರು ಕಣ್ಣುಳ್ಳವಳೂ ಕೆಂಪು ವಸ್ತ್ರವನ್ನು ಧರಿಸಿರುವವಳೂ ವರದಾಭಯ ಹಸ್ತಗಳನ್ನುಳ್ಳವಳೂ ಶಂಖಚಕ್ರಧಾರಿಣಿಯೂ ಕೈಯಲ್ಲಿ ಕಪಾಲ, ಅಂಕುಶ, ಜಪಮಾಲೆ, ಕಮಲಗಳನ್ನು ಹಿಡಿದಿರುವವಳೂ ಕುಮಾರಿಯೂ ಆಗಿರುವ ಗಾಯತ್ರಿಯ ಸ್ವರೂಪವನ್ನು ಧ್ಯಾನಿಸಬೇಕು.

ಆಕೆಯ ಸ್ವರೂಪವನ್ನು ಸಂಕೇತದಲ್ಲಿ ಹೇಳಲಾಗಿದೆ. ಪಂಚಮುಖ ಎಂದರೆ ಪಂಚಭೂತಗಳಾದ ನೀರು, ಗಾಳಿ, ಆಕಾಶ, ಬೆಂಕಿ ಮತ್ತು ಭೂಮಿ. ಹಾಗೆಯೇ ಐದು ಪ್ರಾಣಿಗಳ ಸಂಕೇತವೂ ಹೌದು. ಕಮಲದ ಆಸನದಲ್ಲಿ ಕುಳಿತಿರುವವಳು ಎಂದರೆ ಶುದ್ಧತೆಯ ಸಂಕೇತ. ಮೂರನೆಯ ಕಣ್ಣು ಜ್ಞಾನವನ್ನು ಪ್ರತಿನಿಧಿಸುತ್ತದೆ. ಆಕೆಯ ಕೈಯಲ್ಲಿರುವ ಸಿಹಿಜೇನು ತನ್ನನ್ನು ಜಪಿಸುವವರಿಗೆ ಆನಂದ ಮತ್ತು ಅಮರತ್ವವನ್ನು ನೀಡುವ ಸಂದೇಶವಿದೆ. ಜಪಮಾಲೆ ಮನಸ್ಸಿನ ಏಕಾಗ್ರತೆಯನ್ನು ಸೂಚಿಸುತ್ತದೆ. ಆಕೆಯ ವಾಹನ ಹಂಸ. ಮನುಷ್ಯನು ಹಂಸಕ್ಷೀರದಂತೆ ಅಂದರೆ ಹಂಸ ಹಾಲು–ನೀರನ್ನು ಬೇರ್ಪಡಿಸಿ ಹಾಲನ್ನು ಮಾತ್ರ ಸೇವಿಸುವಂತೆ ಮಾನವ ಒಳ್ಳೆಯದನ್ನು ಮಾತ್ರ ಆಯ್ಕೆ ಮಾಡಿಕೊಳ್ಳಬೇಕು. ಆಕೆಯ ಬಲಗಡೆಯಿರುವ ಸುದರ್ಶನ ಚಕ್ರವು ನಕಾರಾತ್ಮಕ ಗುಣಗಳನ್ನು ತೊಡೆದುಹಾಕಿ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತದೆ. ಶಂಖ– ಇದು ಪ್ರಕೃತಿಯ ಅತ್ಯಂತ ಸುಂದರ ಮತ್ತು ಪರಿಪೂರ್ಣವಾದ ಸೃಷ್ಟಿಯ ಮಹತ್ವವನ್ನು ಹೇಳುವ ವಸ್ತುವಾಗಿದೆ. ಕಮಲ– ಬ್ರಹ್ಮಜ್ಞಾನಿಗೆ ಯಾವುದೇ ದುಷ್ಟತನ ಅಂಟಿಕೊಳ್ಳುವುದಿಲ್ಲ. ತಾವರೆಯ ಎಲೆಗೆ ಹೇಗೆ ನೀರು ಅಂಟಿಕೊಳ್ಳುವುದಿಲ್ಲವೋ ಹಾಗೇ ಬ್ರಹ್ಮಜ್ಞಾನಿ ಈ ಲೌಕಿಕ ಜಗತ್ತಿಗೆ ಅಂಟಿಕೊಳ್ಳುವುದಿಲ್ಲ.

ಗಾಯತ್ರಿ ಮಂತ್ರಕ್ಕೆ 3,500 ವರ್ಷಗಳಷ್ಟು ಪ್ರಾಚೀನ ಇತಿಹಾಸವಿದೆ. ಗಾಯತ್ರಿ ಮಂತ್ರವು ಬ್ರಹ್ಮನ ಮುಖದಿಂದ ಹೊರಹೊಮ್ಮಿತ್ತು ಎಂಬ ಪುರಾಣದ ಕತೆಯೂ ಇದೆ. ಗಾಯತ್ರಿ ಮಂತ್ರದಲ್ಲಿ ಸಕಲ ವೇದದ ಸಾರವೂ ಅಡಕವಾಗಿದೆ.

ವೀರಶೈವ ಪಂಥದ ಕೆರೆಯ ಪದ್ಮರಸನ 'ದೀಕ್ಷಾಬೋಧೆ' ಎಂಬ ಗ್ರಂಥದ ದ್ವಿತೀಯ ಸ್ಥಲದಲ್ಲಿ “”ಇನ್ನು ಕೇಳು ಗಾಯತ್ರಿಯ ನಿಜಮಂ ಸನ್ನುತ ಭೂತಿರುದ್ರಾಕ್ಷಿಗಳಿರಮಂ ನಿಟಿಲ ತ್ರಿಪುಂಡ್ರಾಂಕಿತಯುಕ್ತಾಂಗಿಯ ಜಟೆರುದ್ರಾಕ್ಷಭಸಿತ ಸರ್ವಾಂಗಿಯ ಅಕ್ಷಮಾಲೆ ಜಪಕರದ ಕಮಂಡಲ ನಿಕ್ಷೇಪಿಸಿದಾಗಮಹೃನ್ಮಂಡಲ ಋಗ್ಯಜುಸ್ಸಾಮಂ ನಿಜಮೂರುತಿಯ ಭರ್ಗಭಕ್ತಿಯ ನಿಷ್ಠೆಯ ಮನದರ್ಥಿಯ ಇದು ನಿಜದಾಕಾರಂ” ಎಂದು ಗಾಯತ್ರಿಯ ಸ್ವರೂಪದ ವಿವರಣೆ ಇದೆ. ಗಾಯತ್ರಿಯ ಅಕ್ಷರಗಳಲ್ಲಿ ಒಂದೊಂದು ಅಕ್ಷರವೂ ಒಂದೊಂದು ಶ್ಲೋಕದಲ್ಲಿರುವುದನ್ನು ಶ್ರೀಮದ್ವಾಲ್ಮೀಕಿ ರಾಮಾಯಣದಿಂದ ಉದ್ಧರಿಸಿ, ಇಪ್ಪತ್ನಾಲ್ಕು ಶ್ಲೋಕಗಳುಳ್ಳ ಈ ಗ್ರಂಥ ಭಾಗಕ್ಕೆ 'ಗಾಯತ್ರೀ ರಾಮಾಯಣ' ಎಂದು ಅಂಕಿತ ಮಾಡಿದ್ದಾರೆ. ಇದನ್ನು ಪ್ರತಿದಿನ ಪಠಿಸುವುದರಿಂದ ಸರ್ವಪಾಪಗಳೂ ನಶಿಸುತ್ತವೆ ಎನ್ನುವ ಫಲಶ್ರುತಿಯಿದೆ.

ಗಾಯತ್ರಿ ಮಂತ್ರದಲ್ಲಿ ವೇದಗಳ ಸಕಲ ಸಾರವೂ ಇದೆ. ವೈದಿಕ ಕಾಲದಿಂದಲೂ ಗಾಯತ್ರಿ ಮಂತ್ರದಲ್ಲಿ ತ್ರಿಕಾಲ ಜಪ ಮಾಡಬೇಕು. ಗಾಯತ್ರಿ ಮಂತ್ರವು ವರ್ಗ, ಜಾತಿ ಅಥವಾ ಲಿಂಗಗಳನ್ನು ಮೀರಿದ್ದಾಗಿದೆ. ಯಾರು ಬೇಕಾದರೂ ಗಾಯತ್ರಿ ಮಂತ್ರವನ್ನು ಜಪಿಸಬಹುದು ಎಂದು ಧರ್ಮಶಾಸ್ತ್ರಜ್ಞರು ಅಭಿಪ್ರಾಯಪಟ್ಟಿದ್ದಾರೆ. ವಿಶಿಷ್ಟಾದ್ವೈತ ಮತ ಸ್ಥಾಪಕರಾದ ಶ್ರೀ ರಾಮಾನುಜಾಚಾರ್ಯರು, ಎಲ್ಲರೂ ಗಾಯತ್ರಿ ಮಂತ್ರವನ್ನು ಜಪಿಸಬಹುದು ಎಂದು ಕರೆ ಕೊಟ್ಟಿದ್ದರು. ದಯಾನಂದ ಸರಸ್ವತಿ, ಸ್ವಾಮಿ ವಿವೇಕಾನಂದ ಮೊದಲಾದ ಸುಧಾರಕರು ಎಲ್ಲರಿಗೂ ಗಾಯತ್ರಿ ಮಂತ್ರ ದೊರಕುವಂತೆ ಮಾಡಿದ್ದರು.

■ **ನಿರೂಪಣೆ: ಶ್ರೀವತ್ಸ**



## ಅಭಿನಂದನೆ

'ಶ್ರೀದೇವಿ ಅಂತರಂಗ' ಮಾಸಪತ್ರಿಕೆಯ ಸಂಪಾದಕರಾಗಿರುವ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರನ್ನು ರಾಜ್ಯ ಭಾರತೀಯ ಜನತಾ ಪಕ್ಷದ 'ಕಾರ್ಯದರ್ಶಿ'ಯನ್ನಾಗಿ ನೇಮಿಸಲಾಗಿದೆ ಎಂದು ಪಕ್ಷದ ಪ್ರಕಟಣೆ ತಿಳಿಸುತ್ತದೆ. ಈ ತನಕ ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ಅವರು ತುಮಕೂರಿನ ಬಿಜೆಪಿಯ ಮಹಿಳಾ ಮೋರ್ಚಾದ ಜಿಲ್ಲಾ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರು ತುಮಕೂರಿನಲ್ಲಿ ಕಳೆದ ವರ್ಷ ರಾಷ್ಟ್ರೀಯ ಮಹಿಳಾ ಮೋರ್ಚ್‌ದ ಕಾರ್ಯಕಾರಿ ಸಮಿತಿಯ ಸಭೆಯನ್ನು ಆಯೋಜಿಸಿದ್ದರು.

ಬಿ.ಇ. ಮತ್ತು ಎಂ.ಬಿ.ಎ.ಸ್ನಾತಕೋತ್ತರ ಪದವೀಧರರಾಗಿರುವ ಶ್ರೀಮತಿ ಅಂಬಿಕಾ ಹುಲಿನಾಯ್ಕರ್ ಅವರು ಜಿಲ್ಲೆಯಲ್ಲಿ ಪಕ್ಷ ಸಂಘಟನೆಗೆ ಶ್ರಮಿಸಿದ್ದಾರೆ. ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿಯಾಗಿರುವ ಅವರಿಗೆ ಪಕ್ಷ ಸಂಘಟನೆ ಮತ್ತು ಅಧ್ಯಾತ್ಮ ಪ್ರಿಯವಾದ ವಿಚಾರಗಳಾಗಿವೆ.

ಶ್ರೀಮತಿ ಅಂಬಿಕಾ ಎಂ.ಹುಲಿನಾಯ್ಕರ್ ತಮ್ಮ ಹೊಸ ಜವಾಬ್ದಾರಿಯಲ್ಲಿ ಸರ್ವರೀತಿಯಲ್ಲೂ ಯಶಸ್ವಿಯಾಗಲಿ ಎಂದು ಪತ್ರಿಕೆ ಆಶಿಸಿ ಅವರಿಗೆ ಅಭಿನಂದನೆ ಸಲ್ಲಿಸುತ್ತದೆ.

# ಶ್ರೀದೇವಿ ಆಸ್ಪತ್ರೆಗೆ ವಿನಮ್ರ ಧನ್ಯವಾದಗಳು

◀◀ ...ಮೊದಲನೇ ಪುಟದಿಂದ

ನಾನು ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಆಸ್ಪತ್ರೆಗೆ ತಲುಪಿದೆ. ಪೀಡಿಯಾಟ್ರಿಕ್ಸ್‌ನಲ್ಲಿ ಸ್ನಾತಕೋತ್ತರ ಪದವೀಧರರಾದ ಡಾ. ಅಭಿಷೇಕ್ ಮಕ್ಕಳ ಬಗ್ಗೆ ಒಳ್ಳೆಯ ಸಲಹೆ ನೀಡಿದರು. ಮಕ್ಕಳನ್ನು ನೋಡಿ ಬಹಳ ಚಿಂತೆಯಾಯಿತು ಹಾಗೂ ಆಘಾತವಾಯಿತು. ಆದಾಗ್ಯೂ ನಾನು ಶ್ರೀದೇವಿ ಆಸ್ಪತ್ರೆಯ ಮೇಲಿನ ಭರವಸೆಯನ್ನು ಕಳೆದುಕೊಳ್ಳಲಿಲ್ಲ. ಡಾ.ಅಭಿಷೇಕ್ ಅವರು ನನ್ನ ಶಿಶುಗಳ ಬಗ್ಗೆ ಅಸಾಧಾರಣ ಕಾಳಜಿಯನ್ನು ವಹಿಸಿದ್ದರು.

2023ರ ಜೂನ್ 7ರಂದು ಬೆಳಿಗ್ಗೆ ವೈದ್ಯರಾದ ಡಾ.ಪಲ್ಲವಿ, ಡಾ.ಶಿಲ್ಪಶ್ರೀ, ಡಾ.ಮೌನೇಶ್, ಡಾ.ಮಧುಚಂದನ್ ಹಾಗೂ ಪಿಜಿಗಳಾದ ಡಾ.ಅಭಿಷೇಕ್, ಡಾ.ಚೈತನ್ಯ, ಡಾ.ಶ್ಯಾಮ್, ಡಾ.ರಾಜೀವ್ ಗಾಂಧಿ, ಮತ್ತು ಡಾ. ದಸ್ತಗಿರಿ ಅವರು ನನ್ನೊಂದಿಗೆ ಮಾತನಾಡಿದರು. ನಿಮ್ಮ ಮಕ್ಕಳ ಬಗ್ಗೆ ಡಾ. ರಮಣ ಹಾಗೂ ಡಾ. ಲಾವಣ್ಯ ಅವರು ತಿಳಿಸಿದ್ದಾರೆ, ನಮ್ಮ ವೈದ್ಯರ ತಂಡ ಶಿಶುಗಳನ್ನು ಎಲ್ಲ ರೀತಿಯಿಂದಲೂ ಆರೈಕೆ ಮಾಡುತ್ತದೆ ಎನ್ನುವ ಭರವಸೆ ನೀಡಿದರು. ಈ ಮಾತುಕತೆಯಿಂದಾಗಿ ನನ್ನಲ್ಲಿ ಹೆಚ್ಚಿನ ಆತ್ಮವಿಶ್ವಾಸ ಮೂಡಿತು.

ಹುಟ್ಟಿದ ದಿನದಿಂದ ಏಳು ದಿನಗಳವರೆಗೆ ಎನ್‌ಐಸಿಯುನಲ್ಲಿದ್ದ ಹೆಣ್ಣು ಮಗು ಆಮ್ಲಜನಕದ ಅವಲಂಬನೆಯಿಂದ ಹೊರ ಬಂತು. ಇದು ನಮಗೆ ಸ್ವಲ್ಪ ಸಮಾಧಾನ ನೀಡಿದರೂ, ಗಂಡು ಮಗುವಿಗೆ 3–4 ಸಂಚಿಕೆಗಳ ಡಿಸ್ಯಾಚುರೇಷನ್ ಇತ್ತು. ಒಂದು ದಿನ ಆ ಮಗು ನನ್ನ ಮುಂದೆ ಆಮ್ಲಜನಕದ ಅವಲಂಬನೆಯಲ್ಲಿದ್ದಾಗ ಅದನ್ನು ನೋಡಿ ನನಗೆ ದುಃಖ ಉಮ್ಮಳಿಸಿ ಬಂತು. ಈ ಮಗು ಬದುಕುತ್ತದೆ ಎಂಬ ವಿಶ್ವಾಸವನ್ನೇ ಕಳೆದುಕೊಂಡಿದ್ದೆ. ಡಾ. ಶ್ಯಾಮ್ ಅವರು ಶುಶ್ರೂಷಾ ಸಿಬ್ಬಂದಿಯ ಸಹಾಯದಿಂದ ತಕ್ಷಣವೇ ಪರಿಸ್ಥಿತಿಯನ್ನು ತಹಬದಿಗೆ ತಂದು, ನಿಗದಿತ ಸಮಯದೊಳಗೆ ಮಗು ಸಾಮಾನ್ಯ ಸ್ಥಿತಿಗೆ ಬರುವಂತೆ ಮಾಡಿದರು. ಡಾ. ಶ್ಯಾಮ್ ಅವರು ಅಂತಹ ದಿಟ್ಟ ಕ್ರಮ ಕೈಗೊಳ್ಳದಿದ್ದರೆ, ಆ ದಿನ ಮಗು ಉಳಿಯುತ್ತಿರಲಿಲ್ಲ. ಡಾ. ಶ್ಯಾಮ್ ಅವರ ಅದ್ಭುತ ಕೆಲಸಕ್ಕಾಗಿ ಅವರಿಗೆ ಬಹಳ ಕೃತಜ್ಞನಾಗಿದ್ದೇನೆ.

ಹುಟ್ಟಿದ ಗಳಿಗೆಯಿಂದ ಎನ್‌ಐಸಿಯುನಲ್ಲಿದ್ದ ಅವಳಿ ಶಿಶುಗಳನ್ನು 36 ಹಾಗೂ 37ನೇ ದಿನಕ್ಕೆ ಅವರ ತಾಯಿಯ ಬಳಿಗೆ ಕೊಡಲಾಯಿತು. ಶಿಶುಗಳು ಎನ್‌ಐಸಿಯುನಲ್ಲಿದ್ದ ಸಮಯದಲ್ಲಿ, ನ್ಯೂರೋಸೋನೋಗ್ರಾಮ್, ಎಕ್ಸ್–ರೇ ಮತ್ತು ರೆಟಿನೋಪತಿ ಆಫ್ ಪ್ರಿಮೆಚೂರಿಟಿ (ಆರ್‌ಓಪಿ)ಗಾಗಿ ಸ್ಕ್ರೀನಿಂಗ್‌ನಂತಹ ಅವುಗಳ ಬೆಳವಣಿಗೆಯನ್ನು ಖಚಿತಪಡಿಸಿಕೊಳ್ಳಲು ಅನೇಕ ಪರೀಕ್ಷೆಗಳನ್ನು ಪದೆ ಪದೇ ನಡೆಸಲಾಯಿತು.

ಡಾ. ಲಾವಣ್ಯ ಅವರು ದೇಶದ ವಿವಿಧ ಭಾಗಗಳಲ್ಲಿರುವ ಸೂಪರ್ ಸ್ಪೆಷಲಿಸ್ಟ್‌ಗಳನ್ನು ಸಂಪರ್ಕಿಸುವ ಮೂಲಕ ಶಿಶುಗಳಿಗೆ ಆರ್‌ಓಪಿ ಸ್ಕ್ರೀನಿಂಗ್ ಅನ್ನು ಸುಗಮಗೊಳಿಸಲು ಸಾಕಷ್ಟು ಆಸಕ್ತಿ ವಹಿಸಿದರು. 44ನೇ ದಿನಕ್ಕೆ ಶಿಶುಗಳನ್ನು ಯಶಸ್ವಿಯಾಗಿ ಡಿಸ್ಚಾರ್ಜ್ ಮಾಡಿದರು. ಆಗ ಶ್ರೀದೇವಿ ಆಸ್ಪತ್ರೆಯ ಈ ಶಿಶುಗಳ ವಿಚಾರ ಕುರಿತು ನಾನು ಹೇಳಿದ ಮಾತುಗಳು ಹೀಗಿವೆ.

ಈ ಸಂದರ್ಭದಲ್ಲಿ ಹೇಳುವುದಾದರೆ ಶ್ರೀದೇವಿ ಆಸ್ಪತ್ರೆಯಲ್ಲಿನ ವೈದ್ಯರು ಮತ್ತು ಇತರ ಸಿಬ್ಬಂದಿಗಳ ಸಲಹೆ ಮತ್ತು ಮಾರ್ಗದರ್ಶನ ಅತ್ಯದ್ಭುತವಾಗಿತ್ತು. ಈ ಆಸ್ಪತ್ರೆಯಲ್ಲಿರುವಂತೆ ರೋಗಿ ಮತ್ತು ಸಿಬ್ಬಂದಿಗಳ ನಡುವೆ ಅಂತಹ ಸೌಹಾರ್ದ ಸಂಬಂಧವನ್ನು ನಾನು ನೋಡಿಲ್ಲ.

ನಾವೇನಾದರೂ ಬೇರೆ ಆಸ್ಪತ್ರೆಯಲ್ಲಿ ದಾಖಲಾಗಿದ್ದರೆ, ಅಲ್ಲಿನ ಖರ್ಚನ್ನು ಭರಿಸಿ, ಶಿಶುಗಳನ್ನು ಉಳಿಸಲು ಸಾಧ್ಯವಾಗುತ್ತಿರಲಿಲ್ಲ. ಆಸ್ಪತ್ರೆಯಲ್ಲಿದ್ದಾಗ ಶಿಶುಗಳಿಗೆ ಎಲ್ಲಾ ವೈದ್ಯಕೀಯ ವಿಧಾನಗಳನ್ನು ಪೂರ್ವಭಾವಿ ವೆಚ್ಚದಲ್ಲೇ ಮಾಡಲಾಯಿತು. ಇದಕ್ಕಾಗಿ ಆಸ್ಪತ್ರೆಯ ಆಡಳಿತ ಮಂಡಳಿಗೆ, ವಿಶೇಷವಾಗಿ ಅಧ್ಯಕ್ಷರಾದ ಡಾ. ಎಂ ಆರ್.ಹುಲಿನಾಯ್ಕರ್, ಡಾ.ರಮಣ ಮತ್ತು ಡಾ.ಲಾವಣ್ಯ ಅವರ ನಿರಂತರ ನೈತಿಕ ಹಾಗೂ ಆರ್ಥಿಕ ಬೆಂಬಲಕ್ಕಾಗಿ ಋಣಿಯಾಗಿದ್ದೇವೆ. ಜೊತೆಗೆ ಎಂ.ಎಸ್.ಪಾಟೀಲ್ ಮತ್ತು ಶ್ರೀಮತಿ ಅಂಬಿಕಾ ಅವರುಗಳು ಸಹಾಯ ಮಾಡಿದ್ದಾರೆ.

OBG ವಿಭಾಗದ ಡಾ. ರೇಖಾ ಗುರುಮೂರ್ತಿ ಮತ್ತು ಡಾ.ಜೀವನ್, ಮಕ್ಕಳ ವಿಭಾಗದ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರಾದ ಡಾ. ಎ ಟಿ ಕೆ ರಾವ್, ಅತ್ಯುತ್ತಮ ಮಕ್ಕಳ ವೈದ್ಯರಾದ ಡಾ. ಪಲ್ಲವಿ, ಡಾ. ಶಿಲ್ಪಶ್ರೀ, ಡಾ. ಮೌನೇಶ್, ಡಾ. ಮಧುಚಂದನ್ ಮತ್ತು ಪಿಜಿ ವಿದ್ಯಾರ್ಥಿಗಳಾದ ಡಾ. ಅಭಿಷೇಕ್, ಡಾ. ಚೈತನ್ಯ, ಡಾ. ಶ್ಯಾಮ್, ಡಾ. ರಾಜೀವ್ ಗಾಂಧಿ, ಡಾ. ದಸ್ತಗಿರಿ ಅವರುಗಳಿಗೆ ಅವರ ಅತ್ಯುತ್ತಮ ಕೆಲಸಕ್ಕಾಗಿ ಕೃತಜ್ಞತೆ ಮತ್ತು ಧನ್ಯವಾದಗಳು.

ಶುಶ್ರೂಷೆಯ ಪರಸ್ಪರ ಕ್ರಿಯೆ ಮತ್ತು ವಿಸ್ತರಣೆಯ ವಿಧಾನವು ಆಸ್ಪತ್ರೆಯಲ್ಲಿ ನಿಜವಾಗಿಯೂ ಅತ್ಯುತ್ತಮವಾಗಿತ್ತು. ಶ್ರೀದುರ್ಗಾಂಬಿಕೆಯ ಆಶೀರ್ವಾದದಿಂದ ನನ್ನಿಬ್ಬರು ಮಕ್ಕಳು ಚೆನ್ನಾಗಿದ್ದಾರೆ. ಆ ಮಕ್ಕಳನ್ನು "ಶ್ರೀದೇವಿ ಮಕ್ಕಳು" ಎಂದು ಕರೆಯಲು ನನಗೆ ಬಹಳ ಹೆಮ್ಮೆಯೆನಿಸುತ್ತದೆ.

ನಿಜವಾಗಿಯೂ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು, ಸಂಪೂರ್ಣ ಮನಸ್ಸಿನಿಂದ ಸೇವೆ ಸಲ್ಲಿಸುತ್ತಿರುವ ಆಡಳಿತದ ವರ್ಗದ ಬಗ್ಗೆ ಗೌರವ ಮತ್ತು ಮೆಚ್ಚುಗೆ ಹೆಚ್ಚಾಗಿದೆ. ಮತ್ತೊಮ್ಮೆ ಸಹಾಯ ಮಾಡಿದ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

■ **ಕನ್ನಡಕ್ಕೆ: ಎಂ.ಸುನೀತಾ**

# ಶುಶ್ರೂಷಕರು ವೈದ್ಯಕೀಯ ಕ್ಷೇತ್ರದ ಆಧಾರಸ್ತಂಭ



ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳ ಜೊತೆ ಅತಿಥಿಗಳು.

"ವೈದ್ಯಕೀಯ ಕ್ಷೇತ್ರದಲ್ಲಿ ನಿತ್ಯನೂತನ ಹಾಗೂ ಬಹುಬೇಡಿಕೆಯುಳ್ಳ ಅಧ್ಯಯನ ವಿಭಾಗವೇ ನರ್ಸಿಂಗ್ ಕ್ಷೇತ್ರ. ನರ್ಸಿಂಗ್ ಕ್ಷೇತ್ರದ ಧೃವತಾರೆ ಫ್ಲಾರೆನ್ಸ್ ನೈಟಿಂಗೇಲ್ ವಿಚಾರ ಕೇಳಿದ್ದೇವೆ. (ಜನನ:12.5.1820 ಮರಣ:13.8.1910) ತೊಂಬತ್ತು ವರ್ಷಗಳ ಕಾಲ ಬದುಕಿದ್ದ ಈಕೆ Lighting the Lamp ಸಂದೇಶ ನೀಡಿದರು. ಈ ಕಾರಣಕ್ಕಾಗಿ ನರ್ಸಿಂಗ್‌ಕ್ಷೇತ್ರದಲ್ಲಿ ಪ್ರಾತಃಸ್ಮರಣೀಯರು. ಮೊದಲ ಮಹಾಯುದ್ಧದಲ್ಲಿ ಆಕೆ ಮಾಡಿದ ಸೇವೆಯಿಂದಾಗಿ ಜಗತ್ತಿಗೆ ಶುಶ್ರೂಷಕರ ಮಹತ್ವ ತಿಳಿಯಿತು. ಇಂದಿಗೂ ಆಕೆಯ ಹೆಸರಿನಲ್ಲಿ 'ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆ' ನಡೆಯುತ್ತಿದೆ. ಯುದ್ಧಗಳು ಎರಡು ರಾಷ್ಟ್ರಗಳ ನಡುವೆ ನಡೆಯುತ್ತವೆ. ಅಲ್ಲಿರುವ ನರ್ಸ್‌ಗಳು 'ಜಗತ್ತಿನಲ್ಲಿರುವ ಮಾನವರೆಲ್ಲರೂ ಒಂದೇ ಎನ್ನುವ ಸಂದೇಶ ಬೀರುತ್ತಾ, ಯುದ್ಧದಲ್ಲಿ ಮಡಿದ ಅಥವಾ ಗಾಯಗೊಂಡವರಿಗೆ ಚಿಕಿತ್ಸೆ ಮಾಡುತ್ತಿರುತ್ತಾರೆ. ಅದಕ್ಕಾಗಿಯೇ ಮದರ್ ಥೆರೇಸಾ ಇಂತಹವರನ್ನು 'ಮಾನವೀಯತೆಯ ಪ್ರತಿರೂಪ' ಎಂದಿದ್ದರು.

'ಮೆಡಿಕಲ್ ಕಾಲೇಜ್‌ಗೆ ಹೊಂದಿಕೊಂಡಂತಿರುವ ನರ್ಸಿಂಗ್ ಕಾಲೇಜಿನಲ್ಲಿ ಬಿ.ಎಸ್‌ಸಿ. ಮತ್ತು ಎಂ.ಎಸ್‌ಸಿ. ಮಾಡುವವರು ತುಂಬ ಅದೃಷ್ಟವಂತರು. ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳಿಗೆ ದೊರೆಯುವ ಎಲ್ಲ ಸೌಲಭ್ಯಗಳು ನಿಮಗೂ ದೊರೆಯುತ್ತವೆ.' ಎಂದು ನವೆಂಬರ್ 20ರಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಪ್ರತಿಭಾವಂತ ನರ್ಸಿಂಗ್ ವಿದ್ಯಾರ್ಥಿಗಳಿಗೆ ತುಮಕೂರಿನ ಎ.ಎನ್.ಎಂ. ಸೆಂಟರ್‌ನ ನಿವೃತ್ತ ಪ್ರಾಂಶುಪಾಲರಾದ ದಿವಂಗತ ಎಸ್.ಎನ್.ಸರೋಜಮ್ಮ ಮತ್ತು ದಿವಂಗತ ವಿಮಲಮ್ಮ ನಾರಾಯಣ ಜೋಯಿಸ್ ಅವರ ಹೆಸರಿನಲ್ಲಿದ್ದ ಪ್ರತಿಭಾ ಪುರಸ್ಕಾರವನ್ನು 5 ಜನ ವಿದ್ಯಾರ್ಥಿಗಳಿಗೆ ಪ್ರದಾನ ಮಾಡಿ ಹೇಳಿದರು. ಅವರು ಮಾತು ಮುಂದುವರಿಸಿ "ನಿವೃತ್ತ ಪ್ರಾಂಶುಪಾಲರಾದ ಎಸ್.ಎನ್. ಸರೋಜಮ್ಮ ಮತ್ತು ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್ ಅವರನ್ನು ಅರ್ಥಪೂರ್ಣವಾಗಿ ಜ್ಞಾಪಿಸಿಕೊಳ್ಳಲು ಅವರ ಹೆಸರಿನಲ್ಲಿ ನಮ್ಮ ಶ್ರೀದೇವಿ ಸಂಸ್ಥೆಯಲ್ಲಿ ದತ್ತಿಯಿಟ್ಟಿರುವ ಶ್ರೀಮತಿ ವಿಜಯಲಕ್ಷ್ಮೀ ಸುಧೀಂದ್ರ, ಎನ್.ಲಲಿತಾ ರವೀಂದ್ರ ಮತ್ತು ಎನ್.ಭಾರತಿ ಕಮಲೇಶ್ ಅವರು ಅಭಿನಂದನೆಗೆ ಅರ್ಹರು. ಈ ಎರಡು ಚೇತನಗಳ ಅದರ್ಶ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಬೇಕು.

'ಪ್ರತಿಭಾವಂತ ವಿದ್ಯಾರ್ಥಿಗಳ ಜೊತೆಗೆ ಶ್ರೀದೇವಿ ಶಿಕ್ಷಣ ಸಂಸ್ಥೆ ಮೂವರು ಹಿರಿಯ ಸಾಧಕರನ್ನು ಸನ್ಮಾನ ಮಾಡುತ್ತಿದೆ. ಮೊದಲಿಗೆ ಭಾರತ ಸರ್ಕಾರದ ಹಣಕಾಸು ಇಲಾಖೆಯಲ್ಲಿ ಹಿರಿಯ ಅಧಿಕಾರಿಯಾಗಿದ್ದ ತೊಂಬತ್ತು ವರ್ಷದ ವಿ.ಷಣ್ಮುಖಪ್ಪ– ಅಪ್ಪಾಜಿ. ಶ್ರೀಯುತರು ಪ್ರಾಮಾಣಿಕ ಮತ್ತು ದಕ್ಷ ಅಧಿಕಾರಿ ಹಾಗೂ ಅಧ್ಯಾತ್ಮಜೀವಿಗಳು. ಪೂಜ್ಯ ರಮಣ ಮಹರ್ಷಿಗಳ ಆರಾಧಕರು. ಅವರ ಸೇವೆ ಶ್ರೀದೇವಿ ಸಂಸ್ಥೆಗೂ ದೊರಕಿರುವುದು ನಮ್ಮ ಭಾಗ್ಯ. ಎರಡನೆಯವರು ಫಿಜಿಯೋಥೆರಪಿಸ್ಟ್ ಆಗಿ ನಿವೃತ್ತರಾಗಿರುವ ನಾರಾಯಣಪ್ಪ. ಇವರು ಸಾವಿರಾರು ಜನರ ಆರೋಗ್ಯ ಸುಧಾರಣೆಗೆ ಕಾರಣರಾಗಿದ್ದಾರೆ. ಜೊತೆಗೆ ಬೆಂಗಳೂರಿನ ಕೆಂಪೇಗೌಡ ಮೆಡಿಕಲ್ ಕಾಲೇಜು ಮತ್ತು ಸಾಗರ ಅರೆವೈದ್ಯಕೀಯ ಕಾಲೇಜಿನಲ್ಲಿ ಫಿಜಿಯೋಥೆರಪಿ ಕೋರ್ಸ್‌ಗಳು ಭದ್ರನೆಲೆ ಕಂಡುಕೊಳ್ಳಲು ಕಾರಣಕರ್ತರಾಗಿದ್ದಾರೆ. ಮೂರನೆಯವರು ಸ್ನೇಹ ನರ್ಸಿಂಗ್ ಕಾಲೇಜಿನ ಸ್ಥಾಪಕ ಪ್ರಾಂಶುಪಾಲರು ಮತ್ತು ರಾಜೀವ್ ಗಾಂಧಿ ಆರೋಗ್ಯ ಮತ್ತು ವೈದ್ಯಕೀಯ ಸಂಶೋಧನಾ ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಮತ್ತು ಡೀನ್ ಆಗಿದ್ದ ಡಾ.ಕೆ.ಆರ್.ಶ್ರೀನಿವಾಸ್. ಶ್ರೀಯುತರು ನರ್ಸಿಂಗ್ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿರುವ ನರ್ಸಿಂಗ್ ಶಿಕ್ಷಣ ಕ್ಷೇತ್ರದ ತಜ್ಞರು. ಅವರು ನಮ್ಮ ಸಂಸ್ಥೆಗೆ ಆಗವಿಸಿ ವಿದ್ಯಾರ್ಥಿಗಳಿಗೆ ಕೆಲವು ಹಿತವಚನಗಳನ್ನು ಹೇಳುತ್ತಿರುವುದು ಸ್ವಾಗತಾರ್ಹ ವಿಚಾರ. ಈ ಮೂವರನ್ನೂ ಅಭಿನಂದಿಸುತ್ತೇನೆ." ಎಂದು ಡಾ.ಎಂ.ಆರ್.ಹುಲಿನಾಯ್ಕರ್ ತಿಳಿಸಿದರು.




ದಿವಂಗತ ಎಸ್.ಎನ್.ಸರೋಜಮ್ಮ ಮತ್ತು ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್

ಶ್ರೀದೇವಿ ಶುಶ್ರೂಷ ಮತ್ತು ಶ್ರೀರಮಣ ಮಹರ್ಷಿ ಶುಶ್ರೂಷ ಮಹಾವಿದ್ಯಾಲಯದಲ್ಲಿ ವ್ಯಾಸಂಗ ಮಾಡಿ ಅಪೂರ್ವ ಶೈಕ್ಷಣಿಕ ಸಾಧನೆ ಮಾಡಿರುದ ಅನಘ ಪೌಲ್, ಭಾರತಿ ವಿ. ಹುಣಸಿಕಟ್ಟಿ, ಸುರೇಶ್ ಕೆ.ಎಂ.ವೈಷ್ಣವಿ ಪಾಟೀಲ್ ಮತ್ತು ಪ್ರಿಯಾ ಲಾಮಾ ಅವರು 2023–24ನೇ ಸಾಲಿನ ಎಸ್.ಎನ್. ಸರೋಜಮ್ಮ ಮತ್ತು ವಿಮಲಮ್ಮ ನಾರಾಯಣ ಜೋಯಿಸ್ ಪ್ರತಿಭಾ ಪುರಸ್ಕಾರವನ್ನು ಪಡೆದರು. ನಂತರ ಐವರು ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಾ "ನಮ್ಮ ಶೈಕ್ಷಣಿಕ ಸಾಧನೆಯ ಹಿಂದೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಾಪಕವರ್ಗ ಮತ್ತು ಆಡಳಿತ ಮಂಡಳಿಯಿರುವುದನ್ನು ನೆನೆದು ಅವರಿಗೆ ಕೃತಜ್ಞತೆಗಳನ್ನು ಅರ್ಪಿಸಿದರು."

ತಮಗೆ ಸನ್ಮಾನ ಮಾಡಿದ ಶ್ರೀದೇವಿ ಶಿಕ್ಷಣ ಸಂಸ್ಥೆಯ ಔದಾರ್ಯವನ್ನು ಪ್ರಶಂಸೆ ಮಾಡಿದ ಹಿರಿಯರಾದ ವಿ.ಷಣ್ಮುಖಪ್ಪ ಅವರು, 'ಡಾ. ಹುಲಿನಾಯ್ಕರ್ ಮತ್ತು ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರ ಅಪಾರ ಶ್ರಮದಿಂದ ಶ್ರೀದೇವಿ ವಿದ್ಯಾಸಂಸ್ಥೆ ಮತ್ತು ಆಸ್ಪತ್ರೆ ನಿರ್ಮಾಣವಾಗಿದೆ. ಅದನ್ನು ಮತ್ತಷ್ಟು ಉತ್ತಮ ರೀತಿಯಲ್ಲಿ ಬೆಳೆಸಬೇಕು." ಎಂದು ಕರೆ ಕೊಟ್ಟರು.

ಮತ್ತೊಬ್ಬ ಸನ್ಮಾನಿತರಾದ ಡಾ.ಎನ್.ನಾರಾಯಣಪ್ಪ ಅವರು "ಕಳೆದ ನಲವತ್ತು ವರ್ಷದ ಕೆಳಗೆ ನಾನು ಡಾ.ಎಂ.ಆರ್. ಹುಲಿನಾಯ್ಕರ್ ಅವರ ಜೊತೆಗೆ ತುಮಕೂರಿನ ಜಿಲ್ಲಾಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೆ. ಡಾ.ಹುಲಿನಾಯ್ಕರ್ ಅವರಿಗೆ ವೈದ್ಯಕೀಯ ಕ್ಷೇತ್ರದಲ್ಲಿ ಮುಂದೆ ನಡೆಯುವ ಬೆಳವಣಿಗೆ ಚೆನ್ನಾಗಿ ಗೊತ್ತಿರುತ್ತದೆ. ಅವರ ದೂರದೃಷ್ಟಿ ಹೊಗಳ ಬೇಕಾಗಿರುವ ವಿಚಾರವಾಗಿದೆ. ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ 17 ಅರೆ ವೈದ್ಯಕೀಯ ಕೋರ್ಸ್‌ಗಳಿರುವುದನ್ನು ಕಂಡಾಗ ಡಾ.ಹುಲಿನಾಯ್ಕರ್ ಅವರ ಸಂಘಟನಾ ಸಾಮರ್ಥ್ಯದ ಅರಿವಾಗುತ್ತದೆ. ಈ ಸಂಸ್ಥೆ ಮತ್ತಷ್ಟು ಎತ್ತರಕ್ಕೆ ಬೆಳೆಯುತ್ತದೆ ಎನ್ನುವ ವಿಶ್ವಾಸ ನನ್ನಲ್ಲಿದೆ." ಎಂದರು.

ಮೂರನೆಯ ಅತಿಥಿ ಡಾ.ಕೆ. ಆರ್.ಶ್ರೀನಿವಾಸ್ ಅವರು "ಅರವತ್ತರ ದಶಕದಲ್ಲಿ ನರ್ಸಿಂಗ್ ಮಾಡಿದವರಿಗೆ ಸಮಾಜದಲ್ಲಿ ಗೌರವ ಸ್ಥಾನವಿರುತ್ತಿರಲಿಲ್ಲ. ನಮ್ಮನ್ನು ಎರಡನೆಯ ದರ್ಜೆಯ ನಾಗರಿಕರನ್ನಾಗಿ



Miss Florence Nightingale
(1820-1910)
POINEER OF MODERN NURSING

ಪರಿಗಣಿಸಲಾಗುತ್ತಿತ್ತು. ನಾವು ಶಿಕ್ಷಣವನ್ನು ಮುಂದುವರಿಸಿದೆವು. ನರ್ಸಿಂಗ್ ಸ್ನಾತಕೋತ್ತರ ಪದವಿ ಮತ್ತು ಪಿ.ಎಚ್‌ಡಿ. ಪದವಿಗಳನ್ನು ಪಡೆದ ಮೇಲೆ ಸಮಾಜ ನಮಗೆ ಗೌರವ ಕೊಡಲು ಪ್ರಾರಂಭಿಸಿತು. ನೀವು ಸಹ ಮೊದಲು ಉತ್ತಮ ಶೈಕ್ಷಣಿಕ ಅರ್ಹತೆ ಗಳಿಸಿಕೊಳ್ಳಿ. ಡಾ.ಹುಲಿನಾಯ್ಕರ್ ನಿರ್ಮಿಸಿರುವ ಶ್ರೀದೇವಿ ಶಿಕ್ಷಣ ಸಂಸ್ಥೆ ಬೇಗ ಖಾಸಗಿ ವಿಶ್ವವಿದ್ಯಾಲಯವಾಗಬೇಕು ಎನ್ನುವುದು ನನ್ನಾಸೆ" ಎಂದರು.

ಶ್ರೀದೇವಿ ವೈದ್ಯಕೀಯ ಕಾಲೇಜಿ ನಿರ್ದೇಶಕರಾದ ಡಾ.ರಮಣ ಹುಲಿನಾಯ್ಕರ್ ಅವರು 'ನರ್ಸಿಂಗ್ ಕೋರ್ಸ್‌ನ ವ್ಯಾಸಂಗ ಕಾಲದಲ್ಲಿ ವಿದ್ಯಾರ್ಥಿಗಳು ತಮಗೆ ದೊರೆತ ಎಲ್ಲಾ ಸೌಲಭ್ಯಗಳನ್ನು ಬಳಸಿಕೊಳ್ಳಬೇಕು. ನಮ್ಮಲ್ಲಿರುವ ಆಸ್ಪತ್ರೆ, ಇತರ ಅರೆವೈದ್ಯಕೀಯ ಕೋರ್ಸ್‌ಗಳು ಮತ್ತು ಸುಸಜ್ಜಿತವಾದ ಲ್ಯಾಬ್‌ನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವಿದ್ಯಾರ್ಥಿಜೀವನ ಬದುಕಿನಲ್ಲಿ ದೊರೆಯುವ ಸುವರ್ಣಕಾಲ. ಸಮಯವನ್ನು ವ್ಯರ್ಥ ಮಾಡದೇ ವಿದ್ಯಾರ್ಥಿಗಳು ಕ್ರಿಯಾಶೀಲರಾಗಿರಬೇಕು.

"ಇಂದು ಸನ್ಮಾನ ಸ್ವೀಕರಿಸಿದ ಷಣ್ಮುಖಪ್ಪ ಅಂದರೆ ನಮ್ಮ ತಾತನವರು, ನಮಗೆಲ್ಲಾ ರೋಲ್ ಮಾಡೆಲ್. ನಮ್ಮೆಲ್ಲರ ಮೇಲೂ ಅವರ ಪ್ರಭಾವವಿದೆ" ಎಂದರು

ಡಾ.ಗಂಗಾಧರ್ ಕೊಡ್ಲಿಯವರ ಮಾತನಾಡುತ್ತಾ "ಪೂಜ್ಯ ಷಣ್ಮುಖಪ್ಪ ಅವರು ದೈವಭಕ್ತರು. ನನಗೆ ಹೆಣ್ಣು ಕೊಟ್ಟ ಮಾವನವರು. ತಮ್ಮ ಎಲ್ಲಾ ಮಕ್ಕಳಿಗೂ ಸಂಸ್ಕಾರ ಕಲಿಸಿದ್ದಾರೆ. ರಮಣ ಮಹರ್ಷಿಗಳ ಮೂಲಕ ಇಡೀ ಮನೆತನಕ್ಕೆ ಅಧ್ಯಾತ್ಮಪ್ರಜ್ಞೆ ಮತ್ತು ನೈತಿಕತೆ ದೊರಕಿಸಿ ಕೊಟ್ಟಿದ್ದಾರೆ" ಎಂದರು.

ವಿ.ಮರಿಸ್ವಾಮಿ ಅವರು "ನಮ್ಮ ತಂದೆ ಷಣ್ಮುಖಪ್ಪ ಬಹಳ ಸ್ವಾಭಿಮಾನಿಗಳು. ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಫಲ ಖಂಡಿತ ದೊರೆಯುತ್ತದೆ ಎನ್ನುವ ವಿಶ್ವಾಸವುಳ್ಳವರು. ಅವರ ಶಿಸ್ತು ನಮಗೆಲ್ಲಾ ಪ್ರೇರಣೆ ನೀಡಿದೆ" ಎಂದರು.

ಶ್ರೀದುರ್ಗಾಂಬಿಕಾ ದೇವಸ್ಥಾನ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಶ್ರೀಮತಿ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರ ವಿಶೇಷ ಉಪಸ್ಥಿತಿಯಿತ್ತು. ಶ್ರೀದೇವಿ ವೈದ್ಯಕೀಯ ಕಾಲೇಜಿನ ನೇತ್ರಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ.ಲಾವಣ್ಯ ರಮಣ ಅವರು ವಿ.ಷಣ್ಮುಖಪ್ಪ ಅವರಿಗೆ ಅರ್ಪಿಸಿದ ಸನ್ಮಾನಪತ್ರವನ್ನು ವಾಚನ ಮಾಡಿದರು. ವಿಶೇಷ ಆಹ್ವಾನಿತರಾದ ಎಂ.ಎಸ್.ಪಾಟೀಲ್, ಡಾ.ಮನೋನ್ಮಣಿ, ಶ್ರೀಮತಿ ಅಂಬಿಕಾ ಮತ್ತು ಡಾ.ಕೆ.ಆರ್.ಕಮಲೇಶ್ ಅವರು ವೇದಿಕೆ ಮೇಲಿದ್ದರು

ಪ್ರಾರಂಭದಲ್ಲಿ ಶ್ರೀದೇವಿ ಶುಶ್ರೂಷ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ.ಆರ್.ಕೆ.ಮುನಿಸ್ವಾಮಿ ಅವರು ಸ್ವಾಗತ ಮಾಡಿದರು. ಕೊನೆಯಲ್ಲಿ ಶ್ರೀರಮಣ ಮಹರ್ಷಿ ಶುಶ್ರೂಷ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಪ್ರೊ.ಸಿ.ದಯಾನಂದ ಅವರು ವಂದನಾರ್ಪಣೆ ಮಾಡಿದರು. ಪ್ರೊ.ಎಸ್.ಉಷಾ ಅವರು ಕಾರ್ಯಕ್ರಮ ನಿರೂಪಣೆ ಮಾಡಿದರು. ಪ್ರಾರಂಭದಲ್ಲಿ ದಿವಂಗತ ಎಸ್.ಎನ್.ಸರೋಜಮ್ಮ ಮತ್ತು ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್ ಅವರ ಭಾವಚಿತ್ರಗಳಿಗೆ ಅತಿಥಿಗಳು ಪುಷ್ಪಾರ್ಚನೆ ಮಾಡಿದರು.

■ ವರದಿ: ಎನ್.ಭಾರತಿ



ಹಿರಿಯರಾದ ಷಣ್ಮುಖಪ್ಪಾಜಿ ಅವರಿಗೆ ಆತ್ಮೀಯ ಸನ್ಮಾನ.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor in Chief: **Dr M R Hulinaykar**